ಅಚಲ

ಬಿಡಿಪ್ರತಿ : 4 ರೂ.

ತಿಂಗಳ ಪತ್ರಿಕೆ

ಡಿಸೆಂಬರ್ - 2005

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ - 20 ಸಂಚಿಕೆ : 12

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಪ್ರೀತಿಯ ಚಂದಾದಾರರೇ,

ಅಚಲ ನಿಮ್ಮೆಲ್ಲರ ಪ್ರೋತ್ಸಾಹ ದಿಂದ ಬೆಳೆಯಬೇಕಿದೆ. ನಿಮ್ಮ ಚಂದಾ ಮುಗಿದ ನಂತರ ದಯವಿಟ್ಟು ನವೀಕರಿಸಿ. ನಿಮ್ಮ ಆತ್ಮೀಯರಿಗೆ, ಸ್ನೇಹಿತರಿಗೆ ಚಂದಾ ಮಾಡಿಸಿ 'ಅಚಲ'ದ ಬಳಗವನ್ನು ವಿಸ್ತರಿಸಿ.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಅಪರಾಧದ ಮಹಿಳೀಕರಣ

ಹ್ಯೂಲೆಟ್ ಪ್ಯಾಕರ್ಡ್ (ಎಚ್‌ಪಿ) ಕಾಲ್‌ಸೆಂಟರ್‌ನ ಉದ್ಯೋಗಿ, ಕಂಪ್ಯೂಟರ್ ಎಂಜಿನಿಯರ್ ಪ್ರತಿಭಾ, ಅವರ ಕಂಪೆನಿಯ ಕಾರು ಚಾಲಕನಿಂದ ಅತ್ಯಾಚಾರಕ್ಕೊಳಗಾಗಿ ಬರ್ಬರ ರೀತಿಯಲ್ಲಿ ಹತ್ಯೆಯಾದ ಸುದ್ದಿ ಕಾಳ್ಗಿಚ್ಚಿನಂತೆ ಸುಮಾರು ಒಂದು ವಾರ ಕಾಲ ಪತ್ರಿಕೆಯನ್ನು, ಸಮೂಹ ಮಾಧ್ಯಮಗಳನ್ನು ವ್ಯಾಪಿಸಿದೆ. ಪೋಲಿಸರು ಎಚ್ಚತ್ತು ಪತ್ರಿಕಾ ಸಂದರ್ಶನಗಳಲ್ಲಿ ತಮ್ಮ ಜವಾಬ್ದಾರಿಯುತ ವ್ಯವಸ್ಥೆಯನ್ನು ಸಾರ್ವಜನಿಕರ ಮುಂದೆ ಸಮರ್ಥಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ದುಡಿಯುವ ಮಹಿಳೆಯರ ಸುರಕ್ಷಿತತೆಯನ್ನು ಕಾಯಬೇಕಾದದ್ದು ಉದ್ಯಮದ ಮಾಲೀಕರ ಕರ್ತವ್ಯವೂ ಹೌದು ಎಂದು ತಾಕೀತು ಮಾಡಿದ್ದಾರೆ. ಆದರೆ ಉದ್ಯಮ ಪತಿಗಳೇನೋ ನಿದ್ದೆಯಿಂದ ಎಚ್ಚೆತ್ತವರಂತೆ ಜಾಗೃತರಾಗಿ ತಮ್ಮ ತಮ್ಮ ಸಲಹೆ ಸೂಚನೆಗಳನ್ನು ಮುದಿಡುತ್ತಿದ್ದಾರೆ. ಮುಖ್ಯ ಮಂತ್ರಿಯವರಿಂದ ಹಿಡಿದು ಮಂತ್ರಿ ಮಹೋದಯರೆಲ್ಲಾ ಯಾರ ಜವಾಬ್ದಾರಿ ಎಷ್ಟು? ಎಂದು ಚರ್ಚೆಯ ತಾಲೀಮು ಆರಂಭಿಸಿದ್ದಾರೆ. ಇಂತಹ ಸಂದರ್ಭಗಳಲ್ಲಿ ಉದ್ಯಮಪತಿಗಳು, ಸರ್ಕಾರ ಮತ್ತು ಪೋಲಿಸ್ ಇಲಾಖೆ, ಎಲ್ಲರೂ ಸಮ ಸಮವಾಗಿ ಜವಾಬ್ದಾರಿ ಹೊರದಿದ್ದರೆ ಸಮಸ್ಯೆಗೆ ಪರಿಹಾರ ದೊರೆಯುವುದಿಲ್ಲ.

ದುಡಿಯಲೆಂದು ಮನೆಯಿಂದ ಕಛೇರಿಯ ವಾಹನದಲ್ಲಿ ಕುಳಿತು ಕೆಲಸಕ್ಕೆ ಹೊರಟ ಮೇಲೆ, ಆ ಕ್ಷಣದಿಂದಲೇ ದುಡಿಮೆಯ ಅವಧಿ ಮತ್ತು ಸಂಬಂಧ ಆರಂಭವಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲೂ ಪ್ರತಿಭಾಳ ಮೇಲೆ ನಡೆದ ದೌರ್ಜನ್ಯ ದುಡಿಯುವ ಸ್ಥಳದಲ್ಲಿ ಮಹಿಳೆಯ ಮೇಲೆ ಉಂಟಾಗಿರುವ ಲೈಂಗಿಕ ದೌರ್ಜನ್ಯವೆಂದೇ ವ್ಯಾಖ್ಯಾನಿಸಬೇಕಾಗುತ್ತದೆ. ಇದರ ಸಂಪೂರ್ಣ ಜವಾಬ್ದಾರಿಯನ್ನು ಎಚ್‌ಪಿ ಸಂಸ್ಥೆಯೇ ವಹಿಸಬೇಕು. 'ಆತ್ಮಹತ್ಯಾದಾಳಿಯನ್ನು ತಡೆಯಲು ಯಾರಿಗೆ ಸಾಧ್ಯ? ಪ್ರತಿಭಾ ಸಾವು ಕೂಡ ಅಂತಹ ಒಂದು ಆಕಸ್ಮಿಕ' ಎಂದು ಹೇಳಿ ಕೈತೊಳೆದುಕೊಳ್ಳುವುದು ದುಷ್ಟತನವಾದೀತು ಅಷ್ಟೆ. ಅವರ ಕಚೇರಿಯ ಸಿಬ್ಬಂದಿ ತಾತ್ಕಾಲಿಕವಾದರೇನು, ಗುತ್ತಿಗೆದಾರನಾದರೇನು, ಜವಾಬ್ದಾರಿಯುತ ಜನರನ್ನು ಬಳಸಿಕೊಳ್ಳುವ ವ್ಯವಸ್ಥೆ ಮಾಡಬೇಕಾದದ್ದು ಅವರ ಕರ್ತವ್ಯ. ಉದ್ಯಮ ಸಂಸ್ಥೆಗಳು ಖಾಸಗಿಯಾದರೂ, ಸರ್ಕಾರದ್ದಾದರೂ ಕನಿಷ್ಠ ಮಟ್ಟದ ನೌಕರರ ಹಿತ ಸೌಲಭ್ಯಗಳನ್ನು ಹೊಂದಿರಲೇಬೇಕೆಂದು ಕಡ್ಡಾಯ ಮಾಡಬಲ್ಲ ಅಧಿಕಾರವನ್ನು ಸರ್ಕಾರ ಹೊಂದಿರಲೇಬೇಕು ಮತ್ತು ಅದನ್ನು ಖಂಡಿತ ಚಲಾಯಿಸಬೇಕು.

ಜಾಗತೀಕರಣದ ಅಬ್ಬರದಲ್ಲಿ ಮನುಷ್ಯ, ಅವನ ದುಡಿಮೆ ಎಲ್ಲವನ್ನು ಮಾರುಕಟ್ಟೆಯ ಶಕ್ತಿಯು ಹೇಗೆ ಕಬಳಿಸಿ ಶೂನ್ಯಕ್ಕೆ ತಳ್ಳಬಹುದು, ಎಂಬುದಕ್ಕೆ ಇದೊಂದು ಸ್ಪಷ್ಟನಿದರ್ಶನ. ಎಲ್ಲಿಯವರೆಗೂ ಪ್ರಜೆಗಳ ಸರ್ಕಾರ 'ಕಲ್ಯಾಣ ಸರ್ಕಾರ'ವಾಗಿರುತ್ತದೆ ಅಲ್ಲಿಯವರೆಗೆ ಶ್ರಮಶಕ್ತಿಯನ್ನು ಕೇವಲ ಸರಕಾಗಿ ಭಾವಿಸದೆ ಮನುಷ್ಯರಾಗಿ ಪರಿಭಾವಿಸಲು ಸಾಧ್ಯ.


ಈ ಸಂದರ್ಭದಲ್ಲಿ ಈ ಸಮಸ್ಯೆಯ ಪರಿಹಾರಕ್ಕೆ ಹಲವಾರು ಸಲಹೆ ಸೂಚನೆಗಳು ಬರುತ್ತಿವೆ. ಮಹಿಳೆಯರು ಉದ್ಯೋಗರಂಗದಲ್ಲಿರುವುದನ್ನು ಕೆಂಗಣ್ಣಿನಿಂದ ನೋಡುವ ಕೆಲವರು ರಾತ್ರಿಯ ಪಾಳಿಯ ಕೆಲಸಗಳನ್ನು ಮತ್ತು ಕತ್ತಲ ವೇಳೆಯಲ್ಲಿ ಹೆಂಗಸರು ದುಡಿಯುವುದನ್ನು ನಿಷೇಧಿಸಬೇಕೆಂದು ಸಲಹೆ ನೀಡುತ್ತಿದ್ದಾರೆ. ಇವು ಮಹಿಳೆಯರ ಉದ್ಯೋಗದ ಅವಕಾಶಗಳನ್ನು ಕಡಿಮೆ ಮಾಡುತ್ತದಷ್ಟೆ. ಮಹಿಳೆಯರು ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುತ್ತಿರುವುದು ಇಂದು ಹೊಸ ಸಂಗತಿಯೇನಲ್ಲ, ಟೆಲಿಫೋನ್ ಆಪರೇಟರ್ಸ್, ಪತ್ರಕರ್ತೆಯರು ಬಹಳ ಹಿಂದಿನಿಂದಲೂ ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಅಂತಹ ಸಂದರ್ಭಗಳಲ್ಲಿ ದುಡಿಯುವ ಸ್ಥಳಗಳಲ್ಲಿ ಡಾರ್ಮಿಟರಿ ವ್ಯವಸ್ಥೆಯನ್ನು ಸಂಬಂಧಪಟ್ಟ ವ್ಯವಸ್ಥಾಪಕರು ಮಾಡಿರುತ್ತಾರೆ. ಒಟ್ಟಾರೆಯಾಗಿ ಮಹಿಳೆಯರ ದುಡಿಮೆಯನ್ನು ಕುರಿತಂತೆ ಪುನರ್ ವಿಮರ್ಶಿಸಬೇಕಾದ ಅಗತ್ಯ ಇಂದು ಮುಖ್ಯವಾಗಿ ಎದ್ದುಕಾಣುತ್ತಿದೆ.

ಅತ್ಯಾಚಾರಕ್ಕೊಳಗಾಗಿ ಸಾವನ್ನಪ್ಪಿದ ಪ್ರತಿಭಾ ಪ್ರತಿಷ್ಠಿತ ಕಂಪೆನಿಯ ಕಂಪ್ಯೂಟರ್ ಎಂಜನಿಯರ್ ಆದ್ದರಿಂದ, ಇಂದಿನ ಐಟಿ ಜಗತ್ತಿನ ವರಿಷ್ಟರೆಲ್ಲಾ ಆತಂಕದಿಂದ ಎಚ್ಚೆತ್ತಿದ್ದಾರೆ. ಕೋಟಿಗಟ್ಟಲೆ ವರಮಾನ ತರುವ ಈ ಉದ್ಯಮ ಸರ್ಕಾರಕ್ಕೆ ಮುಖ್ಯವಾಗಿ ಕಾಣುತ್ತದೆಯಾದ್ದರಿಂದ ಈ ಪ್ರಕರಣ ಆತಂಕ ಹುಟ್ಟಿಸುತ್ತದೆ. ದೊಡ್ಡ ದೊಡ್ಡ ಉದ್ಯಮಪತಿಗಳ ಮತ್ತು ಸರ್ಕಾರದ ಕಾಳಜಿ ಇಷ್ಟೊಂದು ವ್ಯಕ್ತವಾಗುತ್ತಿರುವಾಗ ಪೋಲಿಸ್ ಇಲಾಖೆ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಲೇಬೇಕಾಗಿದೆ. ಆದರೆ ವಸ್ತು ಸ್ಥಿತಿಯನ್ನು ಗಮನಿಸಿದಾಗ ಇಂದು ಯಾವ ಮಹಿಳೆಯೂ ಸುರಕ್ಷಿತವಾಗಿಲ್ಲ, ಮಾಲೀಕರಿಂದ ಸಾರಿಗೆ ವ್ಯವಸ್ಥೆಯಿರಲಿ, ಸುರಕ್ಷಿತವಾದ ದುಡಿಯುವ ವ್ಯವಸ್ಥೆಯನ್ನು ಮತ್ತು ದುಡಿಮೆಗೆ ತಕ್ಕ ಸಂಬಳವನ್ನು ನಿರೀಕ್ಷಿಸಲಾಗದ ಲಕ್ಷಾಂತರ ದುಡಿಯುವ ಹೆಣ್ಣು ಮಕ್ಕಳು ದಿನ ನಿತ್ಯವೂ ಇಂದು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಕಟ್ಟಡ ಕೆಲಸದ ಹೆಣ್ಣು ಮಗಳೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಕಣ್ಣೆದುರು ಬರುತ್ತದೆ. ಅತ್ಯಾಚಾರಕ್ಕೊಳಗಾಗಿದ್ದಕ್ಕೆ ದೂರು ಕೊಟ್ಟ ಮಧ್ಯಪ್ರದೇಶದ ಗಿರಿಜನ ಹೆಣ್ಣು ಮಗಳು ಕೈಕಡಿಸಿಕೊಂಡ ದೃಶ್ಯ, ಬಾಲ್ಯವಿವಾಹ ನಿಲ್ಲಿಸಲು ಹೋದ ಸ್ವಯಂಸೇವಕಿ ಭಾಂವ್ರಿದೇವಿ- ಎಲ್ಲರೂ ಜಾಗೃತರಾಗಿ ಮನುಷ್ಯತ್ವ ತೋರಿದಾಗ ಮಾತ್ರ ಎಲ್ಲ ಮಹಿಳೆಯರ ಜೀವಕ್ಕೂ ಬೆಲೆ ಸಿಕ್ಕುತ್ತದೆ ಮತ್ತು ಇಂತಹ ಅಪರಾಧಗಳಿಗೆ ಕಡಿವಾಣ ಹಾಕಬಹುದು.

- ಎನ್. ಗಾಯತ್ರಿ

ಮಲೆಯಾಳದ ಕತೆಗಾರ್ತಿಯರು

-ಶಾಂತಾಕುಮಾರಿ



"ಮಲೆಯಾಳದ ಹತ್ತು ಕತೆಗಾರ್ತಿಯರು" ಪಾರ್ವತಿ ಜಿ. ಐತಾಳರವರ ಅನುವಾದಿತ ಕೃತಿ. ಆಧುನಿಕ ಮಲಯಾಳ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನೊತ್ತಿ ಪ್ರಸಿದ್ಧರಾಗಿರುವ ದಿಟ್ಟ ಹಾಗೂ ಪ್ರತಿಭಾವಂತ ಕತೆಗಾರ್ತಿಯರನ್ನು ಕನ್ನಡಕ್ಕೆ ಪರಿಚಯಿಸಿರುವ ಒಂದು ಒಳ್ಳೆಯ ಪ್ರಯತ್ನ.

ಮಾಧವಿಕುಟ್ಟಿ(ಕಮಲಾದಾಸ್) ಸಾರಾ ಜೋಸೆಫ್ ಹೀಗೆ ಒಂದಿಬ್ಬರನ್ನು ಬಿಟ್ಟರೆ ಇಲ್ಲಿನ ಬಹುಪಾಲು ಲೇಖಕಿಯರು ಕನ್ನಡಿಗರಿಗೆ ಅಪರಿಚಿತರೇ. ಈ ಸಂಕಲನದಲ್ಲಿ ಕಮಲಾದಾಸರಂತಹ ಹಿರಿಯ ಲೇಖಕಿಯರಿಂದ ಹಿಡಿದು ಸಿತಾರಾರಂತಹ ಯುವ ಕತೆಗಾರ್ತಿಯರ ಕತೆಗಳೂ ಇರುವುದರಿಂದ ಇದು ಒಂದು ರೀತಿಯಲ್ಲಿ ಮಲಯಾಳ ಕಥಾ ಸಾಹಿತ್ಯದ ಹಾದಿಯಲ್ಲಿ ಮಹಿಳೆಯರ ಪ್ರಾತಿನಿಧಿಕ ಕತೆಗಳು ಎನ್ನಬಹುದು.

ಇಲ್ಲಿ ಪ್ರತಿಯೊಬ್ಬ ಲೇಖಕಿಯ ಪ್ರಾತಿನಿಧಿಕ ಕತೆಯೊಂದಿಗೆ ಅವರ ಸ್ಥೂಲ ಪರಿಚಯ, ಬರವಣಿಗೆಯ ಹಿನ್ನೆಲೆ, ಅವರು ನಂಬಿಕೊಂಡು ಬಂದ ತತ್ವ, ಅನುಭವ, ಅವರ ನಿಲುವು, ಜೀವನ ದೃಷ್ಟಿಕೋನ ಮುಂತಾದ ವಿವರಗಳನ್ನೊಳಗೊಂಡ ಸಂದರ್ಶನ ಇವಿಷ್ಟನ್ನೂ ಒಳಗೊಂಡಿರುವುದರಿಂದ ಇದಕ್ಕೆ ಒಂದು ಸಮಗ್ರತೆಯ ಸ್ವರೂಪವಿದೆ.

ಮೂಲ ಲೇಖಕಿ ಶ್ರೀದೇವಿ ಕೆ. ನಾಯರ್‌ರವರು ಬಹಳಷ್ಟು ಪೂರ್ವ ತಯ್ಯಾರಿ ನಡೆಸಿ ಲೇಖಕಿಯರ ಸಂದರ್ಶನಗಳನ್ನು ಮಾಡಿರುವುದರಿಂದ ನಮಗೆ ಪ್ರತಿಯೊಬ್ಬ ಲೇಖಕಿಯ ಬರವಣಿಗೆಯ ಹಲವು ಹತ್ತಾರು ಮುಖಗಳನ್ನು ಕಾಣಿಸಿದ್ದಾರೆ. ಸ್ತ್ರೀವಾದ ಮತ್ತು ಮಹಿಳಾ ಸಾಹಿತ್ಯ ಎಂಬುದರ ಕುರಿತು ಎಲ್ಲರ ಹತ್ತಿರವೂ ಅಭಿಪ್ರಾಯ ಸಂಗ್ರಹಿಸಿರುವುದರಿಂದ ಮಲಾಯಾಳಿ ಸಾಹಿತ್ಯದಲ್ಲಿ ಸ್ತ್ರೀವಾದದ ಸ್ವರೂಪ ಹಾಗೂ ಪ್ರಸುತ್ತತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.


ಈ ಎಲ್ಲಾ ಕತೆಗಳ ಧ್ವನಿ ಶೈಲಿ ವಿಶಿಷ್ಟವಾಗಿದೆ. ಲೇಖಕಿಯರ ವಿಚಾರಧಾರೆ ಅದ್ಭುತವಾಗಿದೆ. ಸ್ವತಃ ಲೇಖಕಿಯೇ ಹೇಳುವಂತೆ ಅವರೊಂದಿಗೆ ಹಂಚಿಕೊಂಡ ಕ್ಷಣಗಳು ನೀಡಿದ ಜ್ಞಾನ ಮತ್ತು ಅನುಭವ ಅಪಾರ. ಮಲಯಾಳ ಸಾಹಿತ್ಯಾಂತರಿಕ್ಷದ ಒಂದು ನಕ್ಷತ್ರಪುಂಜವನ್ನು ಹತ್ತಿರದಿಂದ ಅಧ್ಯಯನ ಮಾಡಿ ಕಂಡ ಸತ್ಯಗಳನ್ನು ದಾಖಲಿಸಿದ್ದೇನೆ. ಈ ನಕ್ಷತ್ರಗಳ ಬೆಳಕನ್ನು ಕಾಣುವ ಅವಕಾಶವನ್ನು ಇದನ್ನು ಅನುವಾದಿಸಿದ ಲೇಖಕಿ ಕನ್ನಡಿಗರಿಗೆ ನೀಡಿದ್ದಾರೆ. ಈ ದಿನ ಸ್ತ್ರೀಯರ ಬರಹಗಳ ಆಳ, ವಿಸ್ತಾರತೆಯ ಬಗ್ಗೆ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಕನ್ನಡದ ಲೇಖಕಿಯರು ಬೇರೆ ಭಾಷೆಯ ಲೇಖಕಿಯರ ಬರಹಗಳನ್ನು ಗಮನಿಸಲೇಬೇಕಾದ ಅನಿವಾರ್ಯತೆಯಿದೆ. ಕನ್ನಡದಲ್ಲೂ ಇಂತಹ ಗಂಭೀರ ಕೃತಿಗಳು (ಲೇಖಕಿಯರ ಬರಹಗಳ ಮೇಲೆ) ಬರಬೇಕಾದ ಅಗತ್ಯವಿದೆ.

ಈ ನಿಟ್ಟಿನಲ್ಲಿ ಪಾರ್ವತಿ ಜಿ. ಐತಾಳರವರ ಕಾರ್ಯ ಸುತ್ತ್ಯಾರ್ಹ. ಇದು ಅನುವಾದ ಎಂಬ ಅನುಮಾನವೇ ಬರದಷ್ಟು ಸಹಜವಾಗಿ ಸುಲಲಿತವಾಗಿ ಸಮರ್ಥವಾಗಿ ಲೇಖಕಿ ಅನುವಾದಿಸಿದ್ದಾರೆ. ಇದು ಕನ್ನಡ ಲೇಖಕಿಯರೆಲ್ಲರೂ ಓದಲೇಬೇಕಾದ ಕೃತಿ. ☐☐

ಮಲೆಯೊಳ ಕತೆಗಾರ್ತಿಯರು
(ಪರಿಚಯ - ಪ್ರಾಸ್ತಾವಿಕ-ಸಂದರ್ಶನ-ಕಥೆ)
ಕನ್ನಡಕ್ಕೆ : ಪ್ರೊ|| ಪಾರ್ವತಿ ಜಿ. ಐತಾಳ್
ಪ್ರಕಾಶಕರು : ನವಕರ್ನಾಟಕ ಪ್ರಕಾಶನ ಪ್ರೈ. ಲಿಮಿಟೆಡ್, ಬೆಂಗಳೂರು.

ಬದುಕಿನ ಚಿತ್ತಾರ

-ಶಾಂತಾಕುಮಾರಿ



ಅಡುಗೆ ಮನೆಯೇ ಸ್ತ್ರೀಸಂವೇದನೆಯ ಮೂಸೆಯಾಗಿ ಪಕ್ವಗೊಂಡು ಪಾಕವಾಗಿ ಹೊರಬಿದ್ದ ಕವಿತೆಗಳು ಸಬೀಹಾ ಭೂಮಿಗೌಡರವರ 'ಚಿತ್ತಾರ'ದಲ್ಲಿವೆ.

ವಿಷಯದಲ್ಲಿ ಹೊಸತನವಿಲ್ಲದಿದ್ದರೂ ಅವುಗಳನ್ನು ಕವಿತೆಗಳಾಗಿ ಪ್ರಸ್ತುತ ಪಡಿಸಿದ ರೀತಿಯಲ್ಲಿ ಹೊಸತನವಿದೆ. ಅಡುಗೆ ಮನೆಯೇ ಹೆಣ್ಣಿನ ದನಿಯಾಗಿ, ಅಸಹನೆಯಾಗಿ ಅಲ್ಲಿಂದಲೇ ಜಗತ್ತನ್ನು ಇಣುಕಿ ನೋಡುವ ಪರಿ ಆಸಕ್ತಿ ಹುಟ್ಟಿಸುತ್ತದೆ. ಅಡುಗೆ ಮನೆಯ ಸಾಮಗ್ರಿ, ಪಾತ್ರೆ ಪರಿಸರಗಳಿಗೂ ಸೃಜನಾತ್ಮಕ ನೆಲೆಯಲ್ಲಿ ಸ್ಥಾನ ಒದಗಿಸಿದ ರೀತಿ ಅನನ್ಯ.

ಕವಿತೆಗಳು ಆತ್ಮನಿವೇದನೆಯ ಧಾಟಿಯಲ್ಲಿದ್ದು ಬಾಲ್ಯದ ಅತ್ಯಂತ ಸವಿಯಾದದ್ದೇನನ್ನೋ ಕಳೆದುಕೊಂಡ ಹಪಹಪಿ ಕಾಣುತ್ತದೆ. ಆದರೆ ಅದು ಕೇವಲ ಚಡಪಡಿಕೆಯಾಗಿ ಉಳಿಯದೆ ವಾಸ್ತವವನ್ನು ಒಪ್ಪಿಕೊಳ್ಳುವ ಪಕ್ವತೆಯೂ ಕಂಡುಬರುತ್ತದೆ.

ತಿರುಗಣೆಯ ಜಾಡಿ, ಗಡಾಯಿಕಲ್ಲು ಈ ಎಲ್ಲ ಕಾವ್ಯದ ವಸ್ತುವಾಗುವ ಪರಿ ಮತ್ತು ಆ ಶಬ್ದಗಳು ಹುಟ್ಟಿಸುವ ಆಪ್ತತೆ ಈ ಕವನಗಳು ನಮ್ಮವೂ ಸಹ ಅಂತ ಅಗಿಸುವ ಹಾಗೆ ಮಾಡುತ್ತದೆ. ಇಕ್ಕಟ್ಟು ಪದ್ಯವಂತೂ ಮಧ್ಯಮವರ್ಗದ ಹೆಣ್ಣಿನ ಮನಸ್ಸಿಗೆ ಹಿಡಿದ ಕನ್ನಡಿ. ಸದಾ ತಾಯ್ತನದ ವರ್ಣನೆಯನ್ನೇ ಕೇಳಿ 'ತಂದೆತನ' ಪದ್ಯ ಹೊಸದಾಗಿ ಕಂಡು ಖುಶಿ ನೀಡುತ್ತದೆ. ''ಮಹಾಯಜ್ಞದ ಮುಂದೆ ಪ್ರಧಾನ ಯಾಜಕಳಂತೆ ಕೂತ ಅವ್ವ'' ಅದ್ಭುತವಾದ ಉಪಮೆ. ಕವನ ಸಂಕಲನ ಓದಿ ಕೆಳಗಿಟ್ಟ ಮೇಲೂ ಉಪ್ಪಿನಕಾಯಿಯ ಪರಿಕರ ಹರಡಿ ಕುಳಿತ ಅಮ್ಮನ ಚಿತ್ರ ಕಣ್ಣಿಗೆ ಕಟ್ಟಿದಂತೆ ಕೊರೆದು ನಿಲ್ಲಿಸುತ್ತದೆ. ಲಕ್ಷ್ಮಣ ರೇಖೆಯ ಕೆಲ ಸಾಲುಗಳು 'ಒಂದಿಷ್ಟು ಕಾಸಿದರೆ ನಮ್ಮ ಎರಡಕ್ಕೂ ಸಿದ್ಧ' ಎಂಬಲ್ಲಿ ಗಂಭೀರ ನಿಲುವು ಕವಯಿತ್ರಿಗಿದ್ದರೂ ಕೆಲವೊಮ್ಮೆ ಪುನಃ ಪುನಃ ಹೇಳುವ ಕವನದ ವಸ್ತು ಮತ್ತು ಶಬ್ದಗಳು ಕ್ಲೀಷೆ ಎನಿಸಿ ಬಿಡುತ್ತವೆ. ಕೆಲವೆಡೆ ಇನ್ನೂ ಹೇಳುವುದಿದೆ ಎಂಬ ಭಾವವನ್ನು ಉಳಿಸಿ ಕವಿತೆಗಳು ಅಪೂರ್ಣ ಎನಿಸುತ್ತವೆ. 'ಶೀರ್ಷಾಸನ ಹಾಕಿದರೂ ಹೊಳೆಯಲಾರದು ಶೀರ್ಷಿಕೆ' ಎಂಬಂತಹ ಶಬ್ದ ವ್ಯಾಮೋಹದಿಂದ ಬಿಡಿಸಿಕೊಳ್ಳುವ ಜರೂರತ್ತು ಕವಯಿತ್ರಿಗಿದೆ.

ಇನ್ನೂ ಗಂಭೀರ ಕವನಗಳನ್ನು ಸಬೀಹಾರವರಿಂದ ನಿರೀಕ್ಷಿಸಬಹುದು. ☐☐

ಚಿತ್ತಾರ : ಸಬಿಹಾ ಭೂಮಿಗೌಡ
(ಕವನ ಸಂಕಲನ)
ಪ್ರಕಾಶಕರು : ಲೋಹಿಯಾ ಪ್ರಕಾಶನ ಬಳ್ಳಾರಿ.
ಪುಟ : 58, **ಬೆಲೆ :** 40/-

ಮಹಿಳೆಯರ ಹಾಡು-ಪಾಡು

-ಹೇಮಲತಾ ಮಹಿಷಿ

ಸುವರ್ಣ ಕರ್ನಾಟಕದ ಆಚರಣೆಯ ಸಂದರ್ಭದಲ್ಲಿ, ಈ ಹಿಂದಿನ 50 ವರ್ಷಗಳಲ್ಲಿ ರಾಜ್ಯದ ಮಹಿಳೆಯರು, ಪಡೆದಿದ್ದೇನು, ಉಳಿಸಿಕೊಂಡಿದ್ದೇನು, ಕಳೆದುಕೊಂಡಿದ್ದೇನು ಎಂದು ವಿಶ್ಲೇಷಿಸಲು ಇದು ಸಕಾಲ. ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಮ್ಮ ರಾಜ್ಯದ ಮಹಿಳೆಯರು ಏನಾದರೂ ಬದಲಾವಣೆಯನ್ನು ಕಂಡಿದ್ದಾರೆಯೇ, ಪ್ರಗತಿಯನ್ನು ಸಾಧಿಸಿದ್ದಾರೆಯೇ ಎಂದು ಹುಡುಕಾಟ ನಡೆಸಿದಾಗ ಕರ್ನಾಟಕದ ಇತಿಹಾಸ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ.

ನಮ್ಮ ನೆಲಕ್ಕೆ ತನ್ನದೇ ಆದ ಇತಿಹಾಸವಿದೆ, ಪರಂಪರೆ ಇದೆ, ಗತ ವೈಭವವಿದೆ. ಕಾವೇರಿಯಿಂದ ಗೋದಾವರಿಯವರೆಗಿದ್ದ ನಾಡಿನಲ್ಲಿ ಅಂದು ಆಳಿದ ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಕದಂಬರು, ವಿಜಯನಗರದ ಅರಸರು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಹೋಗಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ ರಾಣಿ ಅಬ್ಬಕ್ಕದೇವಿ, ಚಾಂದ್‌ಬೀಬಿ, ಶಾಂತಲಾದೇವಿ ಈ ನಾಡಿನಲ್ಲಿ ಮಿಂಚಿ ಕಣ್ಮರೆಯಾದ ಮಹಿಳೆಯರು. ಮಧ್ಯಯುಗದ ಬಸವಣ್ಣನವರ ಸಾಮಾಜಿಕ-ಧಾರ್ಮಿಕ ಕ್ರಾಂತಿಯಲ್ಲಿ ಮಹಿಳೆಯರ ಸ್ಥಿತಿಗತಿ ಸುಧಾರಣೆಯೂ ಒಂದು ಬಹುಮುಖ್ಯ ಅಂಶವಾಗಿತ್ತು, ಆ ಕ್ರಾಂತಿಯಲ್ಲಿ ಅನೇಕ ಶಿವಶರಣೆಯರು ಪಾಲ್ಗೊಂಡಿದ್ದರು. ಅಕ್ಕಮಹಾದೇವಿ ಮತ್ತಿತರ ಶಿವಶರಣೆಯರಿಂದ ಬಹುಕಾಲ ಉಳಿಯುವ ಸಾಹಿತ್ಯ ಸೃಷ್ಟಿಯಾಯಿತು ಎನ್ನುವುದು ಇಂದಿಗೂ ಪ್ರಸ್ತುತ.

ಕನ್ನಡಿಗರ ಕನಸಿನ ಫಲವಾಗಿ ಐತಿಹಾಸಿಕ ಕಾರಣದಿಂದಾಗಿ ಹರಿದು ಹಂಚಿ ಹೋಗಿದ್ದ ಕನ್ನಡನಾಡು 50 ವರ್ಷಗಳ ಹಿಂದೆ ಪುನಃ ಒಂದಾಯಿತು, ಕರ್ನಾಟಕವಾಯಿತು. ಭಾರತದ ಹಲವಾರು ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ತನ್ನ ಪ್ರಗತಿಪರ ವಿಚಾರಧಾರೆಯನ್ನು ಇಂದಿಗೂ ಉಳಿಸಿಕೊಂಡಿದೆ. ಇದರಲ್ಲಿ ಮಹಿಳಾ ಪ್ರಗತಿಯೂ ಬರುತ್ತದೆ. ಹಿಂದಿನ 50 ವರ್ಷಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಮಹತ್ವ ದೊರೆತಿದೆ. ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜ್ಯದೆಲ್ಲೆಡೆ ಹರಡಿವೆ. ತಾಲ್ಲೂಕು ಮಟ್ಟದಲ್ಲಿಯೂ ಕಾಲೇಜು ಶಿಕ್ಷಣ ದೊರಕುವ ಅನುಕೂಲತೆ ಇದೆ. ಎಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳು ಜಿಲ್ಲಾಮಟ್ಟದಲ್ಲಿ ಸ್ಥಾಪಿತವಾಗಿವೆ. ಮಹಿಳೆಯರು ಅದರ ಲಾಭ ಪಡೆಯುತ್ತಿದ್ದಾರೆ.

ಮಹಿಳೆಯರಿಗಾಗಿಯೇ ಪಾಲಿಟೆಕ್ನಿಕ್ ಸಂಸ್ಥೆ ಕೂಡ ಸ್ಥಾಪಿತವಾಗಿದೆ. ಇತ್ತೀಚೆಗೆ ವಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ತಲೆ ಎತ್ತಿದೆ. ಆದರೆ, ಅದಿನ್ನೂ ಬೆಳೆಯಬೇಕಾಗಿದೆ. ಕರ್ನಾಟಕ, ಅದರಲ್ಲೂ ಬೆಂಗಳೂರು ಬಯೋಟೆಕ್ ಮತ್ತು ಕಂಪ್ಯೂಟರ್ ಉದ್ದಿಮೆಗಳಿಂದಾಗಿ ವಿಶ್ವದ ಗಮನವನ್ನು ಸೆಳೆಯುತ್ತಿರುವಂತೆಯೇ ಅನೇಕ ಮಹಿಳಾ ಎಂಜಿನಿಯರ್ಸ್ ಮತ್ತು ತಂತ್ರಜ್ಞಾನ ಪ್ರವೀಣರು ಉದ್ಯೋಗ ನಿರತರಾಗುತ್ತಿದ್ದಾರೆ. ಭಾರತದಲ್ಲಿ ಮಹಿಳೆಯರಿಗಾಗಿ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಿದ ಮೊದಲ ರಾಜ್ಯ ಆಂಧ್ರಪ್ರದೇಶ, ಎರಡನೆಯದು ನಮ್ಮ ಕರ್ನಾಟಕ. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಮಾಡಿದ ಸರ್ಕಾರಿ ಆದೇಶದ ಮೂಲಕ ಮಹಿಳೆಯರಿಗೆ ಶೇ. 30 ಮೀಸಲಾತಿ ತರಲಾಯಿತು. ಆದರ ಫಲವಾಗಿ ಇಂದು ಪ್ರತಿಯೊಂದು ಮೀಸಲಾತಿ ವರ್ಗದಲ್ಲಿ ಮಹಿಳೆಯರಿಗೆ ಶೇ. 30 ಒಳಮೀಸಲಾತಿ ನಮ್ಮ ರಾಜ್ಯದಲ್ಲಿದೆ. ಮಹಿಳಾ ಪೊಲೀಸರು, ಮಹಿಳಾ ಕಂಡಕ್ಟರ್ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಮಹಿಳಾ ಪೊಲೀಸ್ ಠಾಣೆಗಳಿವೆ. ವರದಕ್ಷಿಣೆ ಸಾವಿನ ಪ್ರಕರಣದ ತನಿಖೆಗಾಗಿ ಸಿ.ಒ.ಡಿ.ಯಲ್ಲಿ ಪ್ರತ್ಯೇಕ ಸೆಲ್ ಇದೆ. ವಿಶೇಷ ನ್ಯಾಯಾಲಯವಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಭಾಗ ಮೀಸಲಾತಿ ಕಲ್ಪಿಸಿದ ಮೊಟ್ಟಮೊದಲ ರಾಜ್ಯವೂ ನಮ್ಮದೇ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗಿನ ಕೊಡುಗೆ ಇದು. ಸಂವಿಧಾನ ತಿದ್ದುಪಡಿಯಾಗಿ ಇಡೀ ದೇಶದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಿದುದು ನಂತರದ ಬೆಳವಣಿಗೆ. ನಮ್ಮ ರಾಜ್ಯದಲ್ಲಿ ಕ್ರಮಬದ್ಧವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುತ್ತಾ ಬರಲಾಗಿದೆ. ಇದರಿಂದಾಗಿ 1993ರ ಚುನಾವಣೆಯಲ್ಲಿ 35, 305 ಮಹಿಳಾ ಸದಸ್ಯರಿದ್ದರೆ 2000ರಲ್ಲಿ 36,901 ಮತ್ತು 2005ರ ಚುನಾವಣೆಯಲ್ಲಿ 38,147 ಮಹಿಳಾ ಸದಸ್ಯರು ಆಯ್ಕೆಯಾಗುವ ಮೂಲಕ ಮಹಿಳಾ ಸದಸ್ಯರ ಸಂಖ್ಯೆಯಲ್ಲಿ ಏರುಮುಖ ಸಾಧ್ಯವಾಗಿದೆ.

ಸಂಖ್ಯಾ ಬಲದ ದೃಷ್ಟಿಯಿಂದ ಅಷ್ಟೇ ಅಲ್ಲ ಆಡಳಿತದ ಗುಣಮಟ್ಟದ ದೃಷ್ಟಿಯಿಂದಲೂ ಮಹಿಳಾ ಸದಸ್ಯರು ದಕ್ಷತೆ ಮೆರೆದಿರುವ ಅದೆಷ್ಟೋ ಉದಾಹರಣೆಗಳು ನಮ್ಮ ಮುಂದಿವೆ.

ಪಾರ್ಲಿಮೆಂಟು ಇತ್ತೀಚೆಗೆ ಹಿಂದೂ ವಾರಸುದಾರಿಕೆ ಅಧಿನಿಯಮದಲ್ಲಿ ತಿದ್ದುಪಡಿ ತಂದು ಹಿಂದೂ ಹೆಣ್ಣುಮಕ್ಕಳಿಗೆ ತಂದೆಯ ಪಿತ್ರಾರ್ಜಿತ ಆಸ್ತಿಯಲ್ಲಿ ಹುಟ್ಟಿನಿಂದ ಮಗನೊಂದಿಗೆ ಸಮಪಾಲು ಕೊಟ್ಟಿದ್ದರೆ, ಕರ್ನಾಟಕ 1990ರಲ್ಲಿಯೇ ಇಂತಹ ಕಾನೂನನ್ನು ಮಾಡಿದೆ. ಆದರೆ ರಾಷ್ಟ್ರಪತಿಗಳ ಒಪ್ಪಿಗೆ ದೊರೆತು ಜಾರಿಗೆ ಬಂದಿದ್ದು ಮಾತ್ರ 1994ರಲ್ಲಿ. ಹಾಗೆಯೇ ಕೌಟುಂಬಿಕ ಸಮಸ್ಯೆಗಳ ಪರಿಹಾರಕ್ಕಾಗಿ ಕೌಟುಂಬಿಕ ನ್ಯಾಯಾಲಯಗಳನ್ನು ಸ್ಥಾಪಿಸಿದ ಮೊದಲ ರಾಜ್ಯ ನಮ್ಮದು. ಆದರೆ, ಮುಂದೆ ಅದಕ್ಕೆ ಬೇಕಾದ ಮೂಲ ಸೌಲಭ್ಯಗಳನ್ನು ಒದಗಿಸಲು ವಿಫಲವಾಗಿರುವುದು ಅಷ್ಟೇ ಸತ್ಯ. ಹಿಂದಿನ ಕೃಷ್ಣಾ ಸರ್ಕಾರದ ಕಾಲದ ಸ್ತ್ರೀ ಶಕ್ತಿ ಗುಂಪುಗಳು, ಗ್ರಾಮಾಂತರ ಮಹಿಳೆಯರಲ್ಲಿ ಒಂದು ವಿಧದ ಸಂಚಲನವನ್ನು ತಂದಿದೆ.

ರಾಜ್ಯ ಮಹಿಳಾ ಆಯೋಗವು ಸರ್ಕಾರದ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಮಹಿಳೆಯರ ನೆರವಿಗಾಗಿರುವ ಇಂತಹ ಸಂಸ್ಥೆಗಳು ರಾಜಕಾರಣದ ಸುಳಿಯಲ್ಲಿ ಸಿಲುಕಿಕೊಂಡಿರುವುದು ದುರದೃಷ್ಟಕರ. ಅಧ್ಯಕ್ಷರು-ಸದಸ್ಯರ ನೇಮಕಾತಿಗಳೇ ನಡೆಯದೇ ಕಾರ್ಯಚಟುವಟಿಕೆ ಕುಂಠಿತಗೊಂಡಿದೆ.

ಆಗಬೇಕಾದ ಕಾರ್ಯ ಸಾಕಷ್ಟಿದೆ. ಇಂದಿನ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಬಾಲ್ಯ ವಿವಾಹ ನಡೆಯುತ್ತಿದೆ. ಲಂಬಾಣಿ ಮಕ್ಕಳ ಮಾರಾಟವಾಗುತ್ತಿದೆ. ರಾಜ್ಯದೆಲ್ಲೆಡೆ ಮಹಿಳೆಯರ ಮೇಲೆ ಅತ್ಯಾಚಾರ, ಆ್ಯಸಿಡ್ ಪ್ರಕರಣಗಳು ಹೆಚ್ಚುತ್ತಿವೆ. ವರದಕ್ಷಿಣೆ ಸಾವು ವಿಪರೀತವಾಗಿದೆ. ಕೌಟುಂಬಿಕ ಹಿಂಸೆ ಸರ್ವೆಸಾಮಾನ್ಯವಾಗಿದೆ. ಮಂಡ್ಯ-ಬೆಳಗಾವಿ ಜಿಲ್ಲೆಗಳಲ್ಲಿ ಸ್ತ್ರೀ ಭ್ರೂಣ ಹತ್ಯೆ ಹೆಚ್ಚಾಗಿ ನಡೆದಿದ್ದು ಮಹಿಳೆಯರ ಜನಸಂಖ್ಯಾ ಪ್ರಮಾಣ ಕಡಿಮೆಯಾಗಿದೆ. ಆರ್ಥಿಕ ರಾಜಕೀಯ ಔದ್ಯೋಗಿಕ ಕ್ಷೇತ್ರಗಳಲ್ಲಿ ಮಹಿಳೆ ಪ್ರಗತಿ ಸಾಧಿಸಿದರೂ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅವಳಿಗೆ ಸಿಗಬೇಕಾದ ನ್ಯಾಯ ಸಮಾನ ಸ್ಥಾನ-ಮಾನ ದೊರೆತಿಲ್ಲ.

ನಮ್ಮ ಸರ್ಕಾರ ಒಂದು ಮಹಿಳಾ ನೀತಿಯನ್ನು ರೂಪಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಬೇಕು. ರಾಜ್ಯದ ಪ್ರಗತಿಯಲ್ಲಿ ಮಹಿಳೆಯರಿಗೂ ಸಮಪಾಲು, ಸಮಪಾತ್ರ ದೊರೆಕಬೇಕು. ಸರ್ಕಾರಿ ನೇಮಕಾತಿಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕೊಡಬೇಕು. ಎಲ್ಲಾ ಸರ್ಕಾರಿ ಉದ್ಯೋಗಗಳನ್ನು ಮಹಿಳೆಯರಿಗೆ ಮುಕ್ತವಾಗಿಡಬೇಕು. ಅವಶ್ಯಕ ತರಬೇತಿ ಕೊಡಬೇಕು. ಸ್ವ ಉದ್ಯೋಗ ಕೈಗೊಳ್ಳಲು ಸೂಕ್ತ ವಾತಾವರಣ ಕಲ್ಪಿಸಬೇಕು. ❑❑

ಖಂಡನೀಯ

ಮಧ್ಯಪ್ರದೇಶದ ರಾಯ್‌ಸನ್ ಪ್ರಾಂತ್ಯಕ್ಕೆ ಸೇರಿದ ಬುಡಕಟ್ಟು ಜನಾಂಗದ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದ ಹೀನ ಘಟನೆಯ ಜೊತೆಗೆ ಅವಳು ಪೋಲೀಸರಿಗೆ ನೀಡಿದ ದೂರನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದ ಆ ಊರಿನ ಮೇಲು ಜಾತಿಯ ಜನ ನಡೆದುಕೊಂಡ ರೀತಿ ಅನಾಗರೀಕ ಸಂಸ್ಕೃತಿಯ ನಿದರ್ಶನ. ಶಸ್ತ್ರ ಸಜ್ಜಿತರಾಗಿ ಬಂದ ಮೇಲು ಜಾತಿಯವರ ಬೆಂಬಲಿಗರು ಆ ಬಡ ಮಹಿಳೆಯ ಮನೆಯೊಳಕ್ಕೆ ನುಗ್ಗಿ ದೂರನ್ನು ಹಿಂದಕ್ಕೆ ತೆಗೆದುಕೊಳ್ಳಲು ನಿರಾಕರಿಸಿದ ಆ ಮಹಿಳೆಯ ಕೈಗಳನ್ನು ಕೊಡಲಿಯಿಂದ ಕತ್ತರಿಸಿದ್ದಾರೆ. ಶಸ್ತ್ರ ಹೊಂದಿದ್ದ ಈ ದುರಾತ್ಮರ ಕೃತ್ಯವನ್ನು ಅವಳ ಪತಿ, ಸೋದರಿ ಮತ್ತು ಮಗ ಅಸಹಾಯಕರಾಗಿ ನೋಡಬೇಕಾಗಿ ಬಂದದ್ದು ಇನ್ನೂ ದುರಂತ. ಮನೆಯಲ್ಲಿದ್ದ ಉಳಿದವರನ್ನೂ ಚೆನ್ನಾಗಿ ಥಳಿಸಿ, ಮನೆಯಲ್ಲಿದ್ದ ಸಾಮಾನುಗಳನ್ನು ಹಾಳು ಮಾಡಿ ಇಡೀ ಮನೆಗೆ ಬೆಂಕಿ ಹಚ್ಚಲಾಗಿದೆ. ಪ್ರಜಾಪ್ರಭುತ್ವವನ್ನು ಅಣಕಿಸುವ, ಮನುಷ್ಯತ್ವಕ್ಕೆ ಅಪಮಾನ ಮಾಡುವ ಈ ಕೃತ್ಯವನ್ನು ಅಚಲ ಖಂಡಿಸುತ್ತದೆ ಮತ್ತು ಸಂಬಂಧಪಟ್ಟವರನ್ನು ಶಿಕ್ಷಿಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸುತ್ತದೆ.

ಸಾಯದ ಮನು

-ಮಲ್ಲಿಕಾ ಘಂಟಿ

ಹೆಣ್ಣಿನ ಗೋಳ್ಬತ್ತಿ ಬನ್ನಿಯ ಮರಬೆಂದೊ
ಅಲ್ಲಿ ಸನ್ಯಾಸಿ ಮಠಬೆಂದೊ । ಹಾರುವರ
ಪಂಚಾಂಗ್ಬತ್ತಿ ಉರಿದಾವೊ

ಅವ್ವನ ಹಾಡು ಹೈಟೆಕ್ ಲೋಕದ ಮಾಧ್ಯಮಗಳ ಗುಂಡಿ ಒತ್ತಿದರೆ ಸಾಕು ಮನೆಮನೆಯೊಳಗೂ ಬರುತ್ತಿರುವ ಕಾಲದಲ್ಲಿ ಅಂಬೇಡ್ಕರ್‌ರವರ ಸಂವಿಧಾನವನ್ನು ಕೆಂಪು ಪಾವುಡದಲ್ಲಿ ಕಟ್ಟಿ ಪೂಜೆ ಮಾಡುವ ಸನಾತನ ಮನಸ್ಸು ದಲಿತ ಮತ್ತು ಮಹಿಳೆಯರಲ್ಲಿಯೇ ಗಟ್ಟಿಗೊಂಡಿದೆ. ಧರ್ಮದ ಉಳಿಕೆ ಮತ್ತು ಗಳಿಕೆ ಎರಡಕ್ಕೂ ಹೆಣ್ಣು ಮತ್ತು ದಲಿತನೇ ಕಾರಣ. ಇಂತಹ ಕಾರಣಕರ್ತನ ಮೇಲೆಯೇ ನಿರಂತರ ಧರ್ಮನ ವಕ್ತಾರರೆಂದು ಕರೆದುಕೊಂಡವರ ಸವಾರಿ ನಡೆಯುತ್ತಿದೆ. ಸವಾರನ ದಶಬಾಹುಗಳಲ್ಲಿ ಕತ್ತಿ, ಖಡ್ಗ, ಬಾಣ, ಬಿರುಸು, ಬಾಂಬುಗಳೆಲ್ಲ ಫಳಫಳ ಹೊಳೆಯುತ್ತಿದ್ದರೆ ಕಾಲುಗಳು ಮಾತ್ರ ಕಮಲದ ಮೇಲಿವೆ. ಹೃದಯದ ಜಾಗದಲ್ಲಿ ನಂಜುನಾಲಿಗೆ ಹೊರಳಾಡುತ್ತಿದೆ. ಬೌದ್ಧ ಪೂರ್ಣಿಮೆಯ ಬೆಳ್ಳಿ ಬೆಳಕಿಗೆ ಹೆದರಿದ ಕರಾಳ ರಾತ್ರಿಗಳ ಕೇಸರಿಗಳು ಪೋಕ್ರಾನ್ ಪ್ರಯೋಗ ಕೆರಳಿಸಿದರೆ, ಧರ್ಮಯುದ್ಧಕ್ಕೆ ಹೊರಟ ಮತಾಂಧರು ಶಾಂತಿಪ್ರಿಯ ಮೌನಿಬುದ್ಧನ ವಿಗ್ರಹಕ್ಕೆ ಹೆದರಿ ಭಂಜಕತೆಗೆ ತೊಡಗುತ್ತವೆ. ಸತ್ಯವನ್ನು ಅರಗಿಸಿಕೊಳ್ಳಲಾರದ, ವಾಸ್ತವಕ್ಕೆ ಮುಖಾಮುಖಿಯಾಗದ ಹೇಡಿಗಳು ಹಿಡಿದ ಹಾದಿಯ ಕವಲುಗಳಲ್ಲಿ ಬದುಕುವ ಹಂಬಲವುಳ್ಳ ಮನುಷ್ಯ ಜೀವ ಒದಾಡುತ್ತಿದೆ. ಈ ಒದ್ದಾಡುವ ಜೀವಗಳು ಈ ನೆಲದಿಂದ ನಾಮಕರಣಗೊಂಡ ಹೆಣ್ಣು ಗಂಡುಗಳಲ್ಲದ ಹೃದಯದೊಳಗೆ ಸುಳಿಯುವ ಆತ್ಮಗಳು ಬರೀ ಆತ್ಮಗಳು.

ಸ್ವಾತಂತ್ರ್ಯ ಬಂದು ಅರ್ಧಶತಕವಾಗಿರಬಹುದು, ಹೊಸ ಶತಮಾನದ ಹುಸಿ ಬೆಳಕಿನ ಕಿರಣಗಳ ಕಣ್ಣು ಕುಕ್ಕು ಮಸುಕಾಗದಿರಬಹುದು, ಹೈಟೆಕ್ನಾಲಜಿ ನಮ್ಮ ಕಾಲು ಉಗುರಿನ ರಿಪೇರಿಗೆ ಡಾಲರುಗಳ ಲೆಕ್ಕದಲ್ಲಿ ಮುನ್ನಡೆದಿರಬಹುದು. ಜಗತ್ತೆಲ್ಲ ಒಂದು ಹಳ್ಳಿಯಾಗಿರಬಹುದು, ಭೂಮಿ ಸುತ್ತುತ್ತಿಲ್ಲ ಓಡುತ್ತಿದೆ ಎನ್ನಬಹುದು, ಉದಾರೀಕರಣ ಉಳ್ಳವರ ಉದರೀಕರಣಕ್ಕಿಳಿಸಿರಬಹುದು - ಈ ಬಹುದೆಲ್ಲವುಗಳಿಂದ ಬಹು ಸಂಖ್ಯಾತ ಹೆಣ್ಣುಗಂಡುಗಳಿಗೆ ಆದ ಪ್ರಯೋಜನಗಳೆಲ್ಲ ಸಾಯದ ಮನುವಿನ ಒಡೆದ ಕನ್ನಡಿಯ ಚೂರಿನಲ್ಲಿ ಪ್ರತಿಫಲನಗೊಂಡ ಚಿತ್ರಗಳೆನ್ನುವುದರ ಬಗ್ಗೆ ಅನುಮಾನಿಸಬೇಕಿಲ್ಲ, ಮನು ಒಬ್ಬ ವ್ಯಕ್ತಿಯಲ್ಲ, ಅದೊಂದು ಜೀವ ವಿರೋಧಿ ವಿಕೃತ ಮನಸ್ಸು. ಈ ಮನಸ್ಸು ಆಳತೆ ಮಾಡಿ ಜಗತ್ತನ್ನು ಆಳಿದ್ದಲ್ಲ, ಆಳುವುದಲ್ಲ, ಯಾವುದೇ ಕಾಲ, ಗಡಿ, ಸೀಮೆ, ದಂಡೆ, ಬದುವಿಲ್ಲದ ಬದುಕಿನ ಪಥ ಸಂಚಲನವಿದು. ಹೆಣ್ಣು ಗಂಡು, ಜಾತಿ ಮತಗಳಾಚೆಯು ಇದರ ಸಾಮ್ರಾಜ್ಯದ ವಿಸ್ತೀರ್ಣವುಂಟು, ಹೆಣ್ಣು ಹೆಣ್ಣಿನ ಮೂಲಕ ದಮನಕ್ಕೊಳಪಡುವುದು, ಬಲಿಷ್ಠ ಗಂಡಸು ಬಲಹೀನ ಗಂಡಸನ್ನು ಕಾಲಿಗೆ ಸರಪಳಿ ಜಡಿದು ದುಡಿಸಿಕೊಳ್ಳುವುದು. ಸರಪಳಿ ಹಾಕಿದ ಕೈಗಳು, ಹಾಕಿಸಿಕೊಂಡ ಕಾಲುಗಳು ಸೇರಿಯೇ ಹೆಣ್ಣು-ಹೆಂಗಸೆಂದು ತುಳಿಯುತ್ತಿರುವುದನ್ನು ಧರ್ಮಕಾರಣ ಮುಂದು ಮಾಡಿ ಸಮರ್ಥಿಸಿಕೊಳ್ಳುವುದರಲ್ಲಿಯೇ ವೈರಿಯ ಬುದ್ಧಿವಂತಿಕೆ ಮತ್ತು ಆದರ ಅಸ್ತಿತ್ವ ಭದ್ರಗೊಂಡಿರುವುದು. ಮನುಷ್ಯನ ಅಲೆಮಾರಿ ಜೀವನ, ಬೇಟೆಗಾರಿಕೆಯ ಬದುಕನ್ನು ಹೊರತುಪಡಿಸಿದಂತೆ ಉಳಿದೆಲ್ಲ ಕಾಲಘಟ್ಟವೂ ಹೆಣ್ಣನ್ನು ದಮನಕ್ಕೊಳಪಡಿಸುತ್ತಲೇ ಬಂದಿದೆ. ವೇದ ಮತ್ತು ವೇದಪೂರ್ವಕಾಲಗಳಲ್ಲಿ ಹೆಣ್ಣು ವೇದ, ಮಂತ್ರ ಯಜ್ಞಯಾಗಾದಿಗಳಲ್ಲಿ ಭಾಗವಹಿಸುತ್ತಿದ್ದಳು, ಸಮಾನತೆಯಿತ್ತೆಂದು ಹೊತ್ತಿಗೆಯ ಹಳೆಯ ಕಡತಗಳನ್ನು ತಿರುವಿ ಸಮರ್ಥಿಸಿಕೊಳ್ಳಲು, ಸಮಾಧಾನಗೊಳ್ಳಲು ಪ್ರಯತ್ನಿಸುತ್ತೇವೆ. ಮಗನಿಲ್ಲದ ಮನೆಯಲ್ಲಿ ಮಗಳು ಉತ್ತರಾಧಿಕಾರತ್ವ ಪಡೆದಿರುವಳೇ ವಿನಃ ಸಮಾನತೆಯ ಕಾರಣಕ್ಕಾಗಿಯಲ್ಲ, ಗಂಡು ಸಂತಾನವಿಲ್ಲದಾಗ ಕುಟುಂಬ, ಜಾತಿ ಮೂಲದ ಲಾಭನಷ್ಟಗಳಿಗೆ ಅನುಗುಣವಾಗಿ ಮಗಳನ್ನು ಸಾಂಪ್ರದಾಯಿಕವಾಗಿ ಮುಂದೊಡ್ಡಲಾಗಿದೆ. ಪುತ್ರನಿಲ್ಲದಾಗ ಪುತ್ರಿ ಯಜ್ಞಕ್ಕೆ ಕೈ ನೀಡಿ ತಂದೆಯ ಹಕ್ಕು ಬಾಧ್ಯತೆಯನ್ನು ಎತ್ತಿಹಿಡಿದಿರುವಳೇ ಹೊರತು ಆಕೆಯ ಹಕ್ಕೆಂಬ ಕಾರಣಕ್ಕಾಗಿಯಲ್ಲ, ಪತಿಪತ್ನಿಯರಿಬ್ಬರೂ ಯಜ್ಞದಂತಹ ಧಾರ್ಮಿಕ ಕಾರ್ಯದಲ್ಲಿ ಸಹ ಸಮಾನ ಪಾಲ್ಗೊಳ್ಳುವಿಕೆಯಿತ್ತು. ನಂತರ ವೇದಗಳ ಕಾಲ ಇದನ್ನು ಗಂಡಸೇ ಮಾಡಬೇಕಾದ ಶ್ರೇಷ್ಠ ಕಾರ್ಯವೆಂದು ಕರೆಯುತ್ತ ಹೆಣ್ಣನ್ನು ಪಕ್ಕಕ್ಕೆ ಸರಿಸಿತು. ವೇದಯುಗದಲ್ಲಿ ಸಪತ್ನಿಕರಾಗಿಯೇ ಯಜ್ಞಮಾಡುವುದು ಹೆಚ್ಚು ಫಲದಾಯಕವೆಂದು ನಂಬಿದ್ದರು. ಇಂತಹ ಸಂದರ್ಭದಲ್ಲಿ ಹೆಂಡತಿ ಅಕಾಲಮರಣಕ್ಕೆ ಒಳಗಾದರೆ ವಿಧುರನು ಬೇರೆಯೇ ಆದ ಅಗ್ನಿ ಸ್ಥಾಪಿಸಿ ಪೂಜಿಸಬೇಕಾಗಿತ್ತು.

ದೈನಂದಿನ ಯಜ್ಞಕಾರ್ಯಗಳಿಗಾಗಿ ಹೊಸ ಹೆಂಡತಿಯನ್ನು ಹೊಂದಲೇಬೇಕಾಗಿತ್ತು. ಹೆಂಡತಿ ಸತ್ತಮೇಲೆ ವಿಧುರ ಗಂಡಸಿಗೆ ಎರಡು ಹಾದಿಗಳಿದ್ದವು. ಒಂದು ಪ್ರಾಪಂಚಿಕತೆಯನ್ನು ಬಿಟ್ಟು ಕಾಡಿಗೆ ಹೋಗಿ (ವಾನಪ್ರಸ್ಥಾಶ್ರಮ) ಯೋಗ-ಧ್ಯಾನದ ಮೂಲಕ ಉಳಿದ ಕಾಲಕಳೆಯಬೇಕು. ಇನ್ನೊಂದು ಗೃಹಸ್ಥ ಸ್ಥಿತಿಯಲ್ಲಿಯೇ ಉಳಿಯಲು ಇಚ್ಛಿಸಿದರೆ ಸ್ವಜಾತಿಯ ಉತ್ತಮ ಕುಲದ ಅನುರೂಪ ಕನ್ಯೆಯನ್ನು (ಸೂತಕದ ದಿನಗಳು ಕಳೆದ ತಕ್ಷಣವೆ) ಮದುವೆಯಾಗಿ ಅಗ್ನಿಹೋತ್ರವನ್ನು ಮುನ್ನಡೆಸಿಕೊಂಡು ಹೋಗಬೇಕು. ಹೀಗೆ ಹೆಣ್ಣಿಗೆ ಯಜ್ಞಯಾಗಾದಿಗಳಲ್ಲಿ ಗಂಡನ ಪಕ್ಕದಲ್ಲಿರುವ, ಆತನ ಕಾರ್ಯಕ್ಕೆ ಸಹಕರಿಸುವ ಅವಕಾಶವಿತ್ತೇ ಹೊರತು ಹೆಣ್ಣೆ ಮುಂದಾಗಿ ನಿಂತು ಸ್ವತಂತ್ರವಾಗಿ ಯಜ್ಞಯಾಗಾದಿಗಳನ್ನು ಮಾಡುವ ಹಕ್ಕು ಇರಲಿಲ್ಲ. ವಿಧುರ ಗಂಡಸು ಸ್ವಜಾತಿಯ ಕನ್ಯೆಯನ್ನು ಮದುವೆಯಾಗುವುದಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಒಪ್ಪಿಗೆ ಇತ್ತು. ಆದರೆ ಅದೇ ವಿಧವೆಗೆ ತೋರಿಸಿದ ಹಾದಿಗಳೆಂಥವು ಎಂಬುದನ್ನು ನೋಡಿದರೆ ಹಿಂದೂ ಧರ್ಮದ ಪುರುಷ ಪ್ರಧಾನ ಸಂಸ್ಕೃತಿಯ ಅನುಕೂಲಸಿಂಧು ಪ್ರವೃತ್ತಿ ಮತ್ತು ಅದರ ನೀಚತನ ಅರ್ಥವಾಗುತ್ತದೆ. ವಿವಾಹ ಬಂಧನದ ಪವಿತ್ರತೆಯು ಭಾರತದಲ್ಲಿ ವಿಧವಾ ವಿವಾಹವನ್ನು ಅಸಾಧ್ಯವೆಂದು ಸಾರಿದೆ. ಗಂಡ ಸತ್ತಮೇಲೆ ವಿಧವೆ ಹೆಣ್ಣಿಗೆ ಹಿಂದೂ ಧರ್ಮ ಕಲ್ಪಿಸಿದ ಅವಕಾಶಗಳೆಂದರೆ ಒಂದು ಸತ್ತ ಗಂಡನ ಜೊತೆಗೆ ಸ್ಮಶಾನಕ್ಕೆ ಹೋಗಿ ಅವನೊಡಗೂಡಿ ಚಿತೆಯೇರಬೇಕು ಮತ್ತು ಸ್ವರ್ಗದಲ್ಲಿಯು ಅವನ ಅನುವರ್ತಿಯಾಗಿರಬೇಕು. ಇನ್ನೊಂದು ಅವಕಾಶವೆಂದರೆ ಮಕ್ಕಳಿದ್ದರೆ ಅವರ ಪಾಲನೆ ಪೋಷಣೆಯನ್ನು ಜವಾಬ್ದಾರಿಯಿಂದ ಮಾಡುತ್ತ ಕುಲದ ಉದ್ಧಾರಕ್ಕಾಗಿ ದೇಹದಂಡಿಸುತ್ತ, ಪರಪುರಷರ ನೆರಳು ಸಹ ಬೀಳದಂತೆ ಕತ್ತಲೆ ಕೋಣೆಯಲ್ಲಿ ಕುಳಿತು ಬತ್ತಿ ಹೊಸೆಯಬೇಕು ಎಂದು ಹೇಳಿದೆ. ಹೀಗೆ ಕುಟುಂಬ ಜೀವನದಲ್ಲಿ ಅಮಂಗಲೆಯೆಂದು ಹೀಯಾಳಿಸಿಕೊಂಡು, ಅರೆಹೊಟ್ಟೆ ಉಂಡು, ಬೆಳಕು ನೋಡದೆ ತಾಯಿ, ತಂಗಿ, ಹೆಂಡತಿ, ಏನೋ ಆಗಿರಬೇಕು ಎಂದು ನಮ್ಮ ವೇದಗಳು ಹೆಣ್ಣಿಗೆ ಕರ್ತವ್ಯದ ಶರಪಂಜರದೊಳಗಿಟ್ಟಿವೆ. ಆದರೆ ಎಲ್ಲಿಯೂ ಹೆಂಡತಿ ಸತ್ತ ಗಂಡನನ್ನು ವಿಧುರನೆಂದು ಕರೆದು ಬದುಕಿನ ಸುಖಗಳೆಂದೂ ವಂಚಿಸಿಲ್ಲ ಮತ್ತು ಕುಟುಂಬ ಕರ್ತವ್ಯಗಳನ್ನು ಹೊಣೆಗಾರಿಕೆಯನ್ನು ಹೊರಲೇ ಬೇಕು ಎಂದು ಕಡ್ಡಾಯಗೊಳಿಸಿಲ್ಲ. ಹೀಗೆ ಒಮ್ಮುಖ ನೀತಿಯಿಂದ ಹುಟ್ಟಿದ ಕೌಟುಂಬಿಕ ಹೊಣೆಗಾರಿಕೆಗಳು ಹೆಣ್ಣಿನಿಂದ ನಿರಂತರ ತ್ಯಾಗವನ್ನು ಬಯಸುತ್ತಲೇ, ಆಕೆಯನ್ನು ಪರಾಧೀನತೆಗೆ ನೂಕುತ್ತವೆ ಮತ್ತು ಕೀಳರಿಮೆ ತುಂಬುತ್ತವೆ.

ವೈದಿಕ ಯುಗದಲ್ಲಿ ಹೆಣ್ಣು ಕುಟುಂಬದ ಆಸ್ತಿಯ ಭಾಗವಾಗಿರುವುದರಿಂದಲೇ ಆಕೆಯನ್ನು ಕುಟುಂಬದ ಯಜಮಾನ ಮಾರುವ, ಕೊಳ್ಳುವ ಹಾಗೂ ಒತ್ತೆ ಇಡುವ ಹಕ್ಕುಗಳನ್ನೆಲ್ಲ ಧರ್ಮ ಸಮ್ಮತವಾಗಿಯೇ ಪಡೆದುಕೊಂಡಿದೆ ಮತ್ತು ಇದು ಯಜಮಾನ ಸಂಸ್ಕೃತಿಯ ಮೌಲ್ಯವೆಂದೆ ಭಾವಿಸಿದೆ. ಹೀಗೆ ಹೆಣ್ಣುಗಳನ್ನು ಆಕಳು, ಪುಸ್ತಕ, ನೆಲ, ಹಣದ ಜೊತೆಗೆ ಇಟ್ಟು ನೋಡಿರುವುದರಿಂದಲೇ ಸಾಮಂತಶಾಹಿ ಆಕ್ರಮಣದ ಸಂದರ್ಭದಲ್ಲಿ ಇವುಗಳನ್ನು ಗಂಡಸಾದವನು ರಕ್ಷಿಸಬೇಕು. ಹೀಗೆ ರಕ್ಷಿಸುವ ಗಂಡಸಿನ ಗುಣ, ಪರಾಕ್ರಮ, ಶೌರ್ಯ, ಸಾಹಸಗಳು ಮೌಲ್ಯಧರ್ಮವೆಂದು ಒತ್ತಿ ಒತ್ತಿ ಪುರೋಹಿತವರ್ಗ ಶೂದ್ರವರ್ಗಕ್ಕೆ ಹೇಳುತ್ತಾ ಬಂದಿದೆ.

ವೈದಿಕ ಧರ್ಮದ ಈ ಪಕ್ಷಪಾತ ನಿಲುವನ್ನು, ಧೋರಣೆಯನ್ನು ಪ್ರತಿಭಟಿಸುತ್ತಾ ಬಂದ ಬೌದ್ಧ ಧರ್ಮ ಹೆಣ್ಣಿನ ವಿಷಯದಲ್ಲಿ ಮೃದುವಾಗಿತ್ತು. ಪ್ರಾರಂಭದ ಹಂತದಲ್ಲಿ ಬುದ್ಧನು ಸಹ ಹೆಣ್ಣಿಗೆ 'ಸಂಘ' ಸೇರುವ ಅವಕಾಶವನ್ನು ಮುಕ್ತವಾಗಿ ನೀಡಿಲ್ಲ. ತಾಯಿಯ ಬಲವಂತಕ್ಕೆ ಕಟ್ಟುಬಿದ್ದ ಗೌತಮ ಬುದ್ಧನು ಮಹಿಳೆಯರಿಗೆ ಅವರದೆ ಸಂಘ ಕಟ್ಟಿಕೊಳ್ಳಲು, ಭಿಕ್ಷುಣಿಯಾಗಲು ಒಪ್ಪಿಗೆ ನೀಡಿರುವನು. ಹೀಗೆ ಸಂಘ ಸೇರುವ ಮಹಿಳೆಯರಿಗೆ ಎಂಟು ಕರಾರುಗಳನ್ನು ಹಾಕಿರುವನು. ಗೌತಮ ಬುದ್ಧನಿಗೂ ಹೆಣ್ಣಿನ ವಿಷಯದಲ್ಲಿ ಭಯ ಕಾಡಿದೆ. ಅದಕ್ಕೆಂದೆ ಹೇಳುತ್ತಾನೆ "ಭಿಕ್ಷುಗಳು ಇದ್ದಕಡೆಗೆ ಭಿಕ್ಷುಣಿಯರು ಮಳೆಗಾಲದಲ್ಲಿ ಇರಕೂಡದೆಂದು ಕಟ್ಟಪ್ಪಣೆ ಮಾಡುತ್ತಾನೆ. ಹಿಂದೂ ಧರ್ಮದ ಬೂರ್ಜ್ವಾ ನೈತಿಕ ನ್ಯಾಯ ಬುದ್ಧನಂಥವರ ಮನಸ್ಸಿನಲ್ಲಿಯೂ ಕೆಲಸಮಾಡಿದೆ. ಉಚ್ಚಮಟ್ಟದ ದೀಕ್ಷೆಯಲ್ಲಿ ಬಹು ಹಿಂದೆಯೇ ಪಡೆದ ಭಿಕ್ಷುಣಿಯಾದರೂ ಅದೇ ಆಗ ದೀಕ್ಷೆ ಪಡೆದ ಬಾಲಕ ಭಿಕ್ಷುವೊಬ್ಬ ಎದುರು ಬಂದಾಗ ಎದ್ದು ನಿಂತು ನಮಸ್ಕರಿಸಬೇಕು ಎಂದು ಕಟ್ಟುಪಾಡುಗಳನ್ನು ಹಾಕುತ್ತಾನೆ. ಇದು ಏನನ್ನು ತೋರುತ್ತದೆ ಎಂದರೆ ಹೆಣ್ಣಿನ ಬುದ್ಧಿ, ವಯಸ್ಸು, ಹಿರಿತನ, ಅನುಭವ, ಬಲಗಳಿಗಿಂತಲೂ ಗಂಡಾಗಿ ಹುಟ್ಟುವುದೊಂದೇ ಶ್ರೇಷ್ಠವೆಂಬ ವೈದಿಕ ಹಿತಾಸಕ್ತಿ ಬುದ್ಧನಲ್ಲಿಯು ಇತ್ತು. ಈ ನೆಲದಲ್ಲಿ ಗಂಡಾಗಿ ಹುಟ್ಟುವುದೊಂದೇ ಸಾಮಾನ್ಯವಾಗಿ ಶ್ರೇಷ್ಠವೆಂದು ಕರೆಯಿಸಿಕೊಂಡಿದ್ದರೂ ಒಳಗಡೆಗೆ ಜಾತಿ ಶ್ರೇಣೀಕರಣ ಶ್ರೇಷ್ಠ ಕನಿಷ್ಠತೆಗಳನ್ನು ಮಾಡಿಟ್ಟಿದೆ. ಹೊರಗಡೆಗೆ ಮಾತ್ರ ಗಂಡಸಾಗಿ ಹುಟ್ಟುವುದೇ ಶ್ರೇಷ್ಠವೆಂದು ಸಾರುತ್ತಾ

ಬರಲಾಗಿದೆ. ಇಂತಹ ಸಮಾಜದಲ್ಲಿಯೇ ಬುದ್ಧನಂಥವರು ಬೆಳೆದಿರುವರು. ಈ ಕಾರಣಕ್ಕಾಗಿ ಅವನಲ್ಲಿಯೂ ಪುರುಷ ಪ್ರಧಾನ ಸಂಸ್ಕೃತಿಯ 'ಲಿಂಗನೆಲೆ'ಯ ಜೀವವಿರೋಧಿ ವಾಸನೆ ಎಲ್ಲೋ ಒಂದು ಕಡೆ ಹುದುಗಿಕೊಂಡು ಹೆಚ್ಚಿನ ವಿಷಯದಲ್ಲಿ ಒಂದಿಷ್ಟು ಭಯಗ್ರಸ್ಥನನ್ನಾಗಿಸಿದೆ. ಬುದ್ಧನ ಮೃದು ಧೋರಣೆಯ ಕಾರಣದಿಂದ ಅವನೆಲ್ಲಾ ಕರಾರುಗಳಿಗೆ ಒಪ್ಪಿ ಸಂಘಸೇರಿ ಭಿಕ್ಷುಣಿಯಾದವರು ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. 'ಬುದ್ಧಕುಂಡಲ' ಕೇಸಾಳಂತವಳು ಹೆಣ್ಣಿನ ಶಕ್ತಿಯ ಬಗ್ಗೆ ಮಾತನಾಡಿದ್ದಾಳೆ. ಇಂತಹ ಮಾತುಗಳಿಂದ ಪುರುಷ ಪ್ರಧಾನ ಸಂಸ್ಕೃತಿಯ ಗರ್ವ ಸೋರಿಹೋಗಬೇಕಾಗಿತ್ತು. ಆದರೆ ಕರಗದಿರುವುದೆ, ಸೋರದಿರುವುದೆ ಅದರ ಹುಟ್ಟುಗುಣವಾಗಿರುವುದರಿಂದ ಇಂದಿಗೂ ಹಾಗೇ ಉಳಿದುಕೊಂಡ ಬಂದಿದೆ. ಹೆಣ್ಣಿನ ಶಕ್ತಿ ಯುಕ್ತಿಯ ಬಗ್ಗೆ ಕೇಸಾ ಹೀಗೆ ಹೇಳುತ್ತಾಳೆ.

"ಪುರುಷನೆ ಜಾಣನೇನಲ್ಲ ಎಲ್ಲ ಕಾಲದೊಳಗೆ
ಹೆಣ್ಣು ಜಾಣೆಯಾಗಿರುತ್ತಾಳೆ-'ತುಸು' ವೇಗದೊಳಗೆ
ಗಂಡೇ ವಿವೇಕಿಯೇನಲ್ಲ, ಎಲ್ಲ ಕಾಲಗಳಲ್ಲಿ
ಹೆಣ್ಣು ಹಾಗೆನಿಸುವಳು -ಕ್ಷಣ ಕಾಲ ಚಿಂತಿಸಿದಲ್ಲಿ"
(ಥೇರಿಗಾಥಾ-ಡಾ॥ ಮಧು ವೆಂಕಾರೆಡ್ಡಿ)

ಹೆಣ್ಣಿನ ಬುದ್ಧಿವಿಕಾಸ, ದೈಹಿಕ ಬಲವರ್ಧನೆಯನ್ನು ಈ ಸಮಾಜ ಎಂದೂ ಬಯಸಿಲ್ಲ, ಬುದ್ಧಿಬಲಿತರೆ ಪ್ರಶ್ನಿಸಬಲ್ಲಳೆಂದು ಅಕ್ಷರ ಕಲಿಕೆಯಿಂದಲೂ ದೂರವಿಟ್ಟಿತು. ದೇಹ ಬಲಿತರೆ ಪ್ರತಿಭಟಿಸಬಲ್ಲಳೆಂಬ ಭಯದಿಂದ ವ್ರತಾಚಾರಗಳನ್ನು ಹೇಳಿ ಉಪವಾಸಕ್ಕೆ ತೊಡಗಿಸಿತು.

ಭಾರತೀಯ ಸಂದರ್ಭದಲ್ಲಿ ಧರ್ಮವೇ ಪ್ರಧಾನವಾದ್ದರಿಂದ ಎಲ್ಲರನ್ನು ಎಲ್ಲವನ್ನು ಅದರ ಮೂಲಕವೇ ಆಳೆಯುತ್ತೇವೆ. ಹೀಗಾಗಿ ಇಲ್ಲಿ ಒಂದು ಧರ್ಮ ಇನ್ನೊಂದು ಧರ್ಮವನ್ನು ವಿರೋಧಿಸಿ ಜನ ಮನ್ನಣೆಯನ್ನು ಪಡೆಯುವ ಸಲುವಾಗಿ ಹುಡುಕಿಕೊಂಡ ಹಾದಿ ಸ್ತ್ರೀಯರನ್ನು ದಮನಕ್ಕೊಳಗಾದವರನ್ನು ಆಪ್ತವಾಗಿ ಎತ್ತಿಕೊಳ್ಳುವುದು. ಇದೇ ತಂತ್ರಗಾರಿಕೆಯನ್ನಿಟ್ಟುಕೊಂಡೆ ಬೌದ್ಧ ಧರ್ಮವೂ ತನ್ನ ಕಾಲದಲ್ಲಿ ಮಹಿಳೆಯರ ಬಗ್ಗೆ ಮೃದು ಧೋರಣೆ ಹೊಂದಿರಬೇಕು.

ಬೌದ್ಧಧರ್ಮದ ನಂತರ ಬಂದ ಜೈನ ಧರ್ಮವೂ ಹೆಣ್ಣಿನ ಬಗ್ಗೆ ಅಂತಹ ಮಹತ್ತರವಾದದ್ದೇನನ್ನು ಮಾಡಲಿಲ್ಲ. ಬೌದ್ಧಧರ್ಮದ ಹಾಗೇ ಜೈನ ಧರ್ಮದಲ್ಲಿಯೂ ಧರ್ಮ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ಕಂತಿಯರಾಗಿ ಧರ್ಮಪ್ರಸಾರ ಮಾಡುವ ಅವಕಾಶವೇನೋ ಹೆಣ್ಣಿಗೆ ಸಿಕ್ಕಿತ್ತು. ನಿಜ ಆದರೆ 'ಮೋಕ್ಷ' ಪಡೆಯಲು 'ಜೀವ' 'ಗಂಡು ಶರೀರ' ಪಡೆಯಬೇಕೆಂದು ಒತ್ತಿ ಒತ್ತಿ ಹೇಳುವುದರ ಮೂಲಕ ಹೆಣ್ಣು ದೇಹವನ್ನು ನಿರಾಕರಿಸಿತು. ಇಂತಹ ತಾತ್ವಿಕ ಲಿಂಗವಿರೋಧಿ ಸಂಗತಿಗಳು ಧರ್ಮದೊಳಗಿದ್ದುಕೊಂಡು ಸ್ತ್ರೀ ಬಿಡುಗಡೆಯ ಬಗ್ಗೆ ಮಾತನಾಡಿದವು ಎಂಬುದೇ ದುರಂತ. ಎಲ್ಲ ಧರ್ಮಗಳಿಗಿಂತಲೂ ದೇಶಿ ನೆಲೆಯ ವೀರಶೈವ ಧರ್ಮ ಹೆಣ್ಣಿನ ಬಿಡುಗಡೆಯ ಬಗ್ಗೆ ಹೆಣ್ಣು ದೇಹದ ಬಗ್ಗೆ ಅತ್ಯಂತ ಪ್ರಗತಿಪರವಾಗಿಯೇ ಮಾತನಾಡಿತೆಂದರೂ ಅದು ಶರಣ ಸತಿ. ಲಿಂಗ ಪತಿ ಎಂಬುದರ ಮೂಲಕ ವೈದಿಕ ಧರ್ಮದ ಗಂಡಸಿನ ಶ್ರೇಷ್ಠತೆ ಅಹಮ್ಮಿಕೆಯನ್ನು, ಸತಿಯ ವಿನಯ, ವಿಧೇಯತೆಯನ್ನು ಅಂತರ್ಗತ ಮಾಡಿಕೊಂಡೆ ಸಾಮಾಜಿಕ ಬದಲಾವಣೆಗೆ ತೊಡಗಿದ್ದನ್ನು ನೋಡಬಹುದು.

ವೀರಶೈವ, ಜೈನ ಧರ್ಮಗಳಿಗಿಂತಲೂ ಬೌದ್ಧಧರ್ಮ ಹೆಚ್ಚು ಅಪಾಯಕಾರಿಯಾಗಿ ಹಿಂದೂ ಧರ್ಮಕ್ಕೆ ಕಾಣಿಸಿಕೊಂಡಿದೆ. ಬೌದ್ಧಧರ್ಮ ಮಹಿಳೆಯರಿಗೆ ಮೊಟ್ಟಮೊದಲಿಗೆ ಸಾರ್ವಜನಿಕ ಬದುಕಿನಲ್ಲಿ ಬೆರೆತುಕೊಳ್ಳಲು ಅವಕಾಶ ಕಲ್ಪಿಸಿದ್ದ ಹಿಂದೂ ಧರ್ಮಕ್ಕೆ ನುಂಗಲಾರದ ತುತ್ತಾಗಿದೆ. ಸಿದ್ಧಾರ್ಥನಂಥ ರಾಜಕುಮಾರ ಬುದ್ಧನಾಗುವಲ್ಲಿ ಹೆಣ್ಣಿನ ಧ್ವನಿಯೇ ಕಾರಣವೆಂಬುದನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚುತ್ತಾ ಬಂದ ಹಾಗಿದೆ. ಸತ್ಯದ ತಲೆಯ ಮೇಲೆ ಹೊಡೆದಂತೆ ಸಾಂದರ್ಭಿಕ ಕಾರಣ. ಘಟನೆಗಳನ್ನು ಕತೆಮಾಡಿ ಹೇಳುವುದರಲ್ಲಿ ವೈದಿಕರ ಕುಹಕತನ ಅಡಗಿದೆಯೆಂಬುದೇ ನಮಗರ್ಥವಾಗುತ್ತಿಲ್ಲ. ಹೆಣ್ಣಿನ ವಿಷಯದಲ್ಲಂತೂ ಇದು ಇನ್ನು ನಿಗೂಢವಾಗುತ್ತದೆ. ಬುದ್ಧನಾಗಲು, ಜ್ಞಾನಿಯಾಗಲು ಸಿದ್ಧಾರ್ಥನಿಗೆ ಹೆಣ್ಣಿನ ಹಾಡೊಂದು ಕಾರಣವೆಂಬುದನ್ನು ನಾವಾರು ಇಲ್ಲಿಯವರೆಗೂ ಹೇಳಿಲ್ಲ, ಕೇಳಿಲ್ಲ. ಯಾಕೆಂದರೆ ಹೆಣ್ಣಿನಿಂದ ಬುದ್ಧನಾದನೆಂದರೆ ಸಮಸ್ತ ಗಂಡುಕುಲಕ್ಕೆ ಅಪಮಾನ. ಅದಕ್ಕಾಗಿ ನಾವು ಬರೀ ರೋಗಿ, ಮುಪ್ಪು, ಸಾವು, ಬಡತನವನ್ನು ಮುಂದೆ ಮಾಡಿ ಬುದ್ಧನ ಜ್ಞಾನೋದಯವನ್ನು ಅಳೆದಿರುವೆವು. ಕತ್ತಲೆಯಲ್ಲಿ ಸಿಕ್ಕು ಒದ್ದಾಡುತ್ತಿದ್ದ ರಾಜಕುಮಾರನನ್ನು ಕೈ ಹಿಡಿದು ಬೆಳಕಿನೆಡೆಗೆ ತಂದು ಬುದ್ಧನಾಗಿಸಿದ್ದು ಹೆಣ್ಣಿನ ಅಂತರಾಳದ ಹಾಡಿನ ಮರ್ಮವೆಂಬುದನ್ನು ಅರಿಯಬೇಕಾಗಿದೆ. ಬದುಕಿನ ಸತ್ಯ ಎಂತೆಂತಹ ರೂಪದಲ್ಲಿ, ಜಾಗದಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಹೇಳುವುದು ಅಸಾಧ್ಯ.

ಸಿದ್ಧಾರ್ಥ ಬುದ್ಧನಾಗಲು ಪ್ರಬಲ ಕಾರಣವೊಂದು ಹೀಗೆ. "ಬೋಧಿವೃಕ್ಷದ ಕೆಳಗೆ ಕುಳಿತು ಧ್ಯಾನಸ್ಥನಾದ ಸಿದ್ಧಾರ್ಥನಿಗೆ

ಜ್ಞಾನದ ಹೊಳಹು ಸಿಕ್ಕಿದ್ದೇ ಹೆಣ್ಣಿನ ಹಾಡಿನ ಎಳೆಯೊಂದರಲ್ಲಿ. ದುಃಖಮೂಲದ ಬದುಕಿಗೆ ಜಿಗುಪ್ಸೆಗೊಂಡು, ಸುಖದ ಸಂಭ್ರಮದ ಬದುಕಿನಿಂದ ಎದ್ದುಹೋದವನನ್ನು ಕೈ ಹಿಡಿದು ಕರೆದು ಬದುಕಿನ ಜಂಜಡಗಳನ್ನು ಮೀರುವ ಆತ್ಮಬಲವನ್ನು ಈ ಲೋಕದಲ್ಲಿದ್ದೆ ಜೀವನದ ಸಾರ್ಥಕತೆಯನ್ನು ಪಡೆಯುವುದನ್ನು ಅರುಹಿದ್ದು ಹೆಣ್ಣೊಬ್ಬಳ ಅಂತರಾಳದ ರಾಗಪೂರಿತ ಹಾಡಿನ ಹಂಬಲ ಬರೀ ಹಂಬಲ. ವೈರಾಗ್ಯಕ್ಕೆ ಕಾರಣವಾದ ಭೋಗ ಬದುಕಿನ ಭೋಗುಣಿಯನ್ನು ಬೋರಲು ಹಾಕಿ ದಿನಕ್ಕೊಂದು ಅಕ್ಕಿ ಕಾಳಿನ ಮೇಲೆ ಬದುಕಿದ್ದ. ಜೀವಿಸಿದ್ದ ರಾಜಕುಮಾರ ದೈಹಿಕವಾಗಿ, ಮಾನಸಿಕವಾಗಿ ಜರ್ಜರಿತನಾಗಿ ಹೋಗಿದ್ದ. ಆದರೂ ಸತ್ಯ ಸಿಕ್ಕಿರಲಿಲ್ಲ. ಒಂದು ದಿನ ಮುಂಜಾವಿನ ಮುಂಗೋಳಿಯ ಧ್ವನಿ ಸೂರ್ಯನಿಗೆ ಶುಭಕೋರಿತ್ತು. ಜಗತ್ತೆಲ್ಲ ಎಚ್ಚರಗೊಂಡಾಗ ಸಿದ್ಧಾರ್ಥನಿಗೆ ಅರೆಬರೆ ನಿದ್ರಾಸ್ಥಿತಿ. ಮುಂಜಾನೆಯ ತಂಗಾಳಿಯಲ್ಲಿ ತೇಲಿಬಂದ ಹೆಣ್ಣಿನ ಹಾಡಿನ ಧ್ವನಿ ಅವನನ್ನು ಬಡಿದೆಬ್ಬಿಸುತ್ತದೆ. ಯುವತಿಯರ ಗುಂಪೊಂದು ಆ ಹಾದಿಗುಂಟ ಸಾಗುತ್ತಿರುತ್ತದೆ. ಗುಂಪಿನಲ್ಲಿದ್ದಾಕೆ ಒಬ್ಬಳು ಮಧುರವಾಗಿ ಹಾಡುತ್ತಿರುತ್ತಾಳೆ. ಹಾಡಿನ ಅರ್ಥವೇನೆಂದರೆ "ನಲ್ಲನ ಒಲವನ್ನು ಸಂಪಾದಿಸುವುದಕ್ಕೆ ತಾನು ತಂತಿಯನ್ನು ಸರಿಯಾಗಿ ಶೃತಿಮಾಡಿ ಹಾಡಬೇಕು. ಹೆಚ್ಚು ಬಿಗಿದರೆ ತಂತಿ ಹರಿಯುತ್ತದೆ, ಬಿಗಿಯದೆ ಇದ್ದರೆ ಸಂಗೀತ ಹುಟ್ಟುವುದಿಲ್ಲ" ಹಾಡು ಕೇಳಿದ ಸಿದ್ಧಾರ್ಥನ ಕೃಶಗೊಂಡ ದೇಹದಲ್ಲಿ ಸಾವಿರ ಆನೆಬಲ ತುಂಬಿದಂತಾಗಿ ದಿಗ್ಗನೆ ಎದ್ದು ಕುಳಿತುಕೊಳ್ಳುವನು. ನಲ್ಲನೆಂಬುದು ಇಲ್ಲಿ ಗಂಡಲ್ಲ, ಬದುಕು. ಬದುಕನ್ನು ಹದಮಾಡಿಕೊಂಡು ಸಹ್ಯಮಾಡಿಕೊಳ್ಳುವ ಶಕ್ತಿ ಮನುಷ್ಯನಲ್ಲಿಯೇ ಇರುವುದು. ಹುಟ್ಟು, ಸಾವು, ಬಡತನ, ರೋಗರುಜಿ, ಮುಪ್ಪುಗಳೆಲ್ಲ ಬದುಕಿನ ಮೂಲದಲ್ಲಿಯೇ ಇರುವಂಥವುಗಳು. ಅವುಗಳನ್ನು ಸ್ವೀಕರಿಸುವ ಮನಸ್ಸು, ದೇಹ, ಬುದ್ಧಿ, ಭಾವಗಳೆಲ್ಲ ವಾಸ್ತವದ ಮೇಲೆ ಹದಗೊಂಡಿದ್ದರೆ ಎಲ್ಲವೂ ಸಹ್ಯವಾಗಬಲ್ಲವು. ಮನುಷ್ಯ ರೂಪಿತ ಬದುಕನ್ನು ಮನುಷ್ಯನೆ ಹದಗೊಳಿಸಿಕೊಳ್ಳಬೇಕು ಎಂಬ ಜೀವನದ ಮರ್ಮ ಅರ್ಥವಾಗುತ್ತದೆ. ಈ ಅರ್ಥಮೂಲದಿಂದಲೇ ಬುದ್ಧ ಧರ್ಮ ಬೋಧೆಗೆ ತೊಡಗುತ್ತಾನೆ. ಕಠಿಣ ದೇಹ ದಂಡನೆಯ ನಂತರವೂ ಸಿದ್ಧಾರ್ಥ ಸುಜಾತ ಎಂಬ ಹೆಣ್ಣೊಬ್ಬಳ ಕೈಯಿಂದ ಅನ್ನ ಸ್ವೀಕರಿಸಿ ತಾನು ತಿರಸ್ಕರಿಸಿ ಹೋದ ಬದುಕನ್ನು ಹದಮಾಡಿ ಹಾಡಲು ಮೌನಿಯಾಗಿ ನಡೆದು ಬರುತ್ತಾನೆ ಜಗತ್ತಿನೊಳಗೆ.

ಹೆಣ್ಣಿನ ಕೈಯಲ್ಲಿ ಬದುಕಿನ ವೀಣೆ ನಿಸರ್ಗ ಸಹಜವಾಗಿಯೇ ಸಿಕ್ಕಿದೆ. ಅದನ್ನು ಹದಗೊಳಿಸಲು ಆಕೆಯ ವಿವೇಚನೆಗೆ ಬಿಟ್ಟಿಲ್ಲ. ಗಂಡಸು ಹೆಣ್ಣಿನ ಬೆನ್ನಲ್ಲಿ ಕತ್ತಿಯಾಗಿ ಆಕೆಯಿಂದ ಹಾಡಿಸುವ, ಶೃತಿಗೊಳಿಸುವ ವಕ್ತಾರನಾಗಿರುವುದರಿಂದ ಬದುಕಿನ ವೀಣೆಯ ತಂತಿ ಒಂದೊಂದು ಸಲ ಹರಿಯುವ, ಸಡಿಲಗೊಳ್ಳುವ, ಅಪಸ್ವರಗೊಳ್ಳುವುದೆಲ್ಲ ಚರಿತ್ರೆಯುದ್ದಕ್ಕೂ ನಡೆದುಕೊಂಡು ಬಂದಿದೆ. ಬೌದ್ಧಯುಗದಲ್ಲಿ ಹೆಣ್ಣಿಗೆ ಸಿಕ್ಕ ಸ್ಥಾನಮಾನಗಳ ಬಗ್ಗೆ ಸ್ಮೃತಿಗಳ ಕಾಲಕ್ಕೆ ಬಂದಾಗ ವೈದಿಕರಿಗೆ ಭಯ ಕಾಡಿದೆ. ಬೌದ್ಧ ಧರ್ಮದ ಕೃಶಗೊಂಡ ದೇಹ ಮನಸ್ಸಿನೊಳಗೆ ವೈದಿಕ ಹಿತಾಸಕ್ತಿಗಳು ಮೆಲ್ಲಗೆ ನುಸುಳಿ ಆಶ್ರಯ ಪಡೆಯುತ್ತವೆ. ಅದರ ಕತ್ತು ಹಿಚುಕಿ ಮತ್ತೆ ಅಂತಿಮವಾಗಿ ಇದಕ್ಕೆ ಮೊಳೆ ಜಡಿದವನು 'ಮನು' ಎಂಬ ಜೀವವಿರೋಧಿ. ವಿಕೃತ ಮನಸ್ಸಿನ ವ್ಯಕ್ತಿಯೆನ್ನಬಹುದು. ಬೌದ್ಧಯುಗದಲ್ಲಿ ಹೆಣ್ಣು ಪಡೆದಿದ್ದ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಆಕೆಗೆ ಅನ್ಯಾಶ್ರಯದ ಬದುಕಿನಲ್ಲಿರಿಸುವುದೇ ಅವನ ಆಶಯವಾಗಿತ್ತು. ಬೌದ್ಧ ಧರ್ಮದ ಮೂಲಕ ಹೆಣ್ಣು ಪಡೆದುಕೊಂಡ ಸಾಮಾಜಿಕ ಬದುಕಿನ ಸ್ವಾತಂತ್ರ್ಯದ ಬಲದಿಂದ ವರ್ಣಸಂಕರವಾಗುವ ಅವಕಾಶಗಳಿದ್ದವು. ಮೇಲು ಜಾತಿಯ ಹೆಣ್ಣುಗಳು ತಮಗೆ ದೊರೆತ ಸ್ವಾತಂತ್ರ್ಯದ ಬಲದಿಂದ, ಶೂದ್ರನನ್ನು ಮದುವೆಯಾಗಿ ವರ್ಣ ವ್ಯವಸ್ಥೆಯನ್ನು ನಾಶಪಡಿಸ ಬಲ್ಲಳೆಂಬುದನ್ನು ಮನು ಅರ್ಥಮಾಡಿಕೊಂಡಿದ್ದ. ವರ್ಣಮೂಲದಲ್ಲಿಯೇ ತನ್ನ ಉಳಿಕೆಯನ್ನು ಕಂಡುಕೊಂಡಿದ್ದವನು ಅದನ್ನು ಗಟ್ಟಿಗೊಳಿಸಲು ಬೇಕಾದ ನೀತಿ ಸಂಹಿತೆಯನ್ನು ಬರೆದು ಅದಕ್ಕೊಂದು ಧಾರ್ಮಿಕ ಮತ್ತು ರಾಜಕೀಯ ಮನ್ನಣೆಯನ್ನು ಪಡೆಯುತ್ತಲೇ ಸಾಮಾಜಿಕ ಶಾಸನವಾಗಿಸಿದ. ಮನುವಿನ ದೃಷ್ಟಿಯಲ್ಲಿ ಹೆಣ್ಣು ಮತ್ತು ಶೂದ್ರ (ಶ್ರಮ ಸಂಸ್ಕೃತಿಯ ನೇತಾರರು) ಅತ್ಯಂತ ಅಪಾಯಕಾರಿಗಳಾಗಿ ಮತ್ತು ಬಲಿಷ್ಠರಾಗಿ ಕಾಣಿಸಿದ್ದಾರೆ. ಈ ಶಕ್ತಿಗಳಿಗೆ ಹೆದರಿರುವ ಕಾರಣವೇ ಇವರ ಸ್ವಾತಂತ್ರ್ಯವನ್ನು ಅಪಹರಿಸುವುದೆ ತನ್ನ ಯೋಜಿತ ಕಾರ್ಯದ ಬಹುಮುಖ್ಯ ಅಜೆಂಡವಾಗಿಸಿರುವನು. ಹೆಣ್ಣಿನ ಮತ್ತು ಶೂದ್ರರ ಆಸ್ತಿಯ ಹಕ್ಕನ್ನು ಕಿತ್ತುಕೊಳ್ಳುವುದರ ಮೂಲಕ ಅವರನ್ನು ಪರಾಧೀನಗೊಳಿಸಿದ. ಮಾರ್ಕ್ಸ್ ಹುಟ್ಟುವ ಪೂರ್ವದಲ್ಲಿಯೇ ಮನುವಿಗೆ ಗೊತ್ತಿತ್ತು - ಆಸ್ತಿ ಹಣ, ಮನುಷ್ಯನ ಬಾಯಿ ತೆರೆಯಿಸುವ ಬೀಗದ ಕೈಗಳೆಂದು. ಅದಕ್ಕಾಗಿಯೇ ಮೊಟ್ಟಮೊದಲಿಗೆ ಅದನ್ನು ಕಿತ್ತುಕೊಳ್ಳುವುದರ ಮೂಲಕ ಬಲಿಷ್ಠ ಜನಸಮುದಾಯವನ್ನು ಬಲಹೀನಗೊಳಿಸಿದ. ಹೆಂಡತಿ, ಮಗ, ಆಳು ಇವರಿಗೆ ಆಸ್ತಿ ಇರಬಾರದು ಎಂದು ಹೇಳುವುದರ ಮೂಲಕವೇ ಕುಟುಂಬದೊಳಗೆ ಮತ್ತು ಸಮಾಜದೊಳಗೆ ಏಕಕಾಲದಲ್ಲಿಯೇ ಯಜಮಾನ

ಸಂಸ್ಕೃತಿಯ ಹಿಡಿತಕ್ಕನುಗುಣವಾಗಿ ನೀತಿ ಸಂಹಿತೆ ರೂಪಿಸುತ್ತಾನೆ. ಹೆಣ್ಣಿನ ಬಗ್ಗೆಯಂತೂ ಎಂತಹ ಭಯವಿತ್ತೆಂದರೆ ಹೆಣ್ಣು ಮಗು. ಹೆಂಡತಿ, ಸಹೋದರಿ, ತಾಯಿಯಾದಿಯಾಗಿ ಗಂಡಸು ಎನಿಸಿಕೊಳ್ಳುವ ಪ್ರಾಣಿಯ ಜೊತೆಯಲ್ಲಿ ಏಕಾಂತನಾಗಿರಕೂಡದೆಂದು ವಾರ್ನಿಂಗ್ ಮಾಡುತ್ತಾನೆ. ಹೆಣ್ಣು ಕೆಡಿಸುವುದಕ್ಕಾಗಿಯೇ ಹುಟ್ಟಿದ ಜೀವವೆನ್ನುತ್ತಾನೆ. ಚಂಚಲೆಯೇ ಹೆಣ್ಣೆಂದು ಕರೆದ ಮನು ಗಂಡನ್ನು ದೌರ್ಬಲ್ಯಗಳ ಮೂಟೆ ಎನ್ನಲಿಲ್ಲ, ಗಂಡು ಸ್ಥಿತಪ್ರಜ್ಞನಾಗಿಯೇ ಇರಬಲ್ಲ ಆದರೆ ಹೆಣ್ಣು ಅವನಲ್ಲಿ ಲಾಲಸೆ ಮೂಡಿಸಬಲ್ಲವಳಾಗಿರುವುದರಿಂದ ಅವಳು ಯಾವುದೇ ರೂಪ, ವಯಸ್ಸಿನಲ್ಲಿದ್ದರೂ, ಗಂಡಿನ ಜೊತೆ ಏಕಾಂತವಾಗಿರಕೂಡದೆಂದು ಕಟ್ಟೆಚ್ಚರಿಕೆ ನೀಡುತ್ತಾನೆ.

ಬುದ್ಧನ ವಿಚಾರಗಳ ಬಗ್ಗೆ ಸಹಮತವಿಲ್ಲದ ಅವನ ಅನುಯಾಯಿಗಳು ಹೆಣ್ಣಿನ ವಿಷಯದಲ್ಲಿ ಜಗ್ಗಾಡಿರುವರು ಎಷ್ಟೋ ಸಲ. ಬುದ್ಧ ಮತ್ತು ಅವನ ಅನುಯಾಯಿಗಳ ಜೊತೆಯಲ್ಲಿ ಹಿಂದೂ ವಕ್ತಾರರೂ ಚರ್ಚೆ ನಡೆಸಿರುವರು. ಇಂತಹ ಚರ್ಚೆಯ ಸಂದರ್ಭದಲ್ಲಿ ಸ್ತ್ರೀ ಸಂಬಂಧಿ ಸಂಗತಿಗಳು ಬಂದಿವೆ. ಕುಟುಂಬದಾಚೆಗೆ ಮಹಿಳೆಯನ್ನಿಟ್ಟು ನೋಡುವ ಪ್ರಯತ್ನವನ್ನು ಬುದ್ಧನಿಗೂ ಮಾಡಲು ಸಾಧ್ಯವಾಗಿಲ್ಲ. ಉದಾಹರಣೆಗಾಗಿ ನೋಡುವುದಾದರೆ ಬ್ರಾಹ್ಮಣನೊಬ್ಬ ಬುದ್ಧನಿಗೆ ಹೀಗೆ ಹೇಳಿದನಂತೆ "ಉಚ್ಚಕುಲದಲ್ಲಿ ನಜಿಸಿದ ಸ್ತ್ರೀಯೇ ಸರ್ವಶ್ರೇಷ್ಠ ಸದ್ಗೃಹಿಣಿಯಾಗಬಲ್ಲಳು'' ಎಂದು. ಅದಕ್ಕೆ ಬುದ್ಧ ನೀಡಿದ ಉತ್ತರ "ಸರ್ವೋತ್ಕೃಷ್ಟ ಸಂಸಾರ ಮಾಡುವ ಸ್ತ್ರೀಯೇ ಸರ್ವೋತ್ತಮ ಗೃಹಿಣಿಯಾಗಬಲ್ಲಳು. ಪತಿಯು ಪತ್ನಿಯನ್ನು ಸನ್ಮಾನಿಸಬೇಕು, ಗೌರವಿಸಬೇಕು. ಅವಳ ಜೊತೆ ವಿನಯದಿಂದ ವರ್ತಿಸಬೇಕು. ಅವಳ ವಿಶ್ವಾಸವನ್ನು ಗಳಿಸಬೇಕು. ಮನೆಯ ಕಾರ್ಯಕಲಾಪಗಳಲ್ಲಿ ಜವಾಬ್ದಾರಿಯನ್ನು ವಹಿಸಬೇಕು. ಅವಳಿಗೆ ಗಂಡನಾದವನು ಆಭರಣವನ್ನು ಕೊಡಿಸಬೇಕು. ಅದಕ್ಕೆ ಬದಲಾಗಿ ಪತ್ನಿಯು ಪತಿಯ ಮೇಲೆ ಪ್ರೇಮದ ಮಳೆ ಸುರಿಸಬೇಕು. ಗೃಹಕೃತ್ಯವನ್ನು ಜವಾಬ್ದಾರಿಯಿಂದ ಸಂಬಾಳಿಸಿಕೊಂಡು ಹೋಗಬೇಕು. ತನ್ನ ತಂದೆ-ತಾಯಿ ಅತ್ತೆ-ಮಾವಂದಿರಿಂದ ಮತ್ತು ಉಳಿದ ಸಂಬಂಧಿಕರನ್ನು ಯೋಗ್ಯ ರೀತಿಯಲ್ಲಿ ಆದರಿಸಿ ಸತ್ಕರಿಸಬೇಕು. ತನ್ನ ಸ್ವಾತಂತ್ರ್ಯದಿಂದ ಅವನ ವಿಶ್ವಾಸವನ್ನು ಗಳಿಸಬೇಕು'' (ವಿಚಾರ ಸಾಹಿತ್ಯ ಮಹಿಳೆ : ಸಂ. ಅನಸೂಯಾ ಕಾಂಬಳೆ) ಎನ್ನುವ ಮಾತುಗಳನ್ನು ನೋಡಿದಾಗ ಬುದ್ಧನಲ್ಲಿಯು ಸ್ತ್ರೀ ಸಂಬಂಧಿ ಸಂಗತಿಗಳು ಕುಟುಂಬದಾಚೆಗೆ ನೋಡುವುದರಿಂದ ಮಾಡಿದವುಗಳು ಎನಿಸುವುದಿಲ್ಲ, ಖಾಸಗಿ ಆಸ್ತಿಯ ಉಗಮದೊಂದಿಗೆ ಗಟ್ಟಿಗೊಂಡ ಕುಟುಂಬ ಸಂಸ್ಥೆಯಲ್ಲಿ ಹೆಣ್ಣು ಕೂಲಿರಹಿತ ನಿಷ್ಠಾವಂತ ಜೀತದಾಳು, ಸಂತಾನೋತ್ಪತ್ತಿಯನ್ನು ಲೈಂಗಿಕ ಪಾವಿತ್ರ್ಯತೆಯ ಮೂಲಕ ಮುಂದುವರಿಸಿಕೊಂಡು ಹೋಗಬೇಕಾದ ಪ್ರಾಣಿ ಎಂದ ಹಿಂದೂ ಸನಾತನದ ವ್ಯಾಖ್ಯಾನವನ್ನೆ ಒಂದಿಷ್ಟು ಹಿಂದುಮುಂದಾಗಿ ಹೇಳಿದಂತೆ ತೋರುವುದೇ ಹೊರತು ಸ್ತ್ರೀ ಬದುಕಿನ ಸ್ಥಿತ್ಯಂತರಕ್ಕೆ ಕಾರಣವಾಗಬಹುದಾದ ಮಾತುಗಳು ಎನಿಸಲಾರವು.

ಈ ನೆಲಕಂಡ ಯಾವುದೇ ಸಾಮಾಜಿಕ, ಧಾರ್ಮಿಕ ಚಳುವಳಿಗಳು, ಚಳುವಳಿಯ ನಾಯಕರು ಹೆಣ್ಣಿಗೆ ಸಂಬಂಧಿಸಿದ ಹಾಗೆ ಇರುವ ಸಮಸ್ಯೆಗಳನ್ನು ಇಡಿಯಾಗಿ ಗ್ರಹಿಸಿದಂತೆ ಕಾಣಿಸುವುದಿಲ್ಲ. ಅಂದಂದಿನ ಕಾಲದ ಒಳಗಡೆ ಹೆಣ್ಣನ್ನು ಇಟ್ಟು ಅವಳ ತತ್‌ಕ್ಷಣದ ಸಮಸ್ಯೆಗಳ ಬಗ್ಗೆ ಆಲೋಚಿಸಿ ಸುಧಾರಣೆ ತರಬಯಸಿರುವರೆ ವಿನಃ ಬದಲಾವಣೆಗೆ ತೊಡಗಿಲ್ಲ. ಅದನ್ನು ನಾವು ಆರೋಪಿಸುವುದು ಸರಿಯಲ್ಲ, ಆ ಕಾಲದ ಬೆಳವಣಿಗೆಯ ಮಧ್ಯದಲ್ಲಿ ಅವರಿಗೆ ಕಾಣಿಸಿಕೊಂಡ ಕಣ್ಣ ಬೆಳಕಿನ ನೆಲೆಯಲ್ಲಿ ಸದಾಶಯದಿಂದ ಸುಧಾರಣೆಗೆ ತೊಡಗಿರುವರು. ಹೆಣ್ಣನ್ನು ಕುಟುಂಬ ನೆಲೆಯಲ್ಲಿ ಆಸ್ತಿಯ ಭಾಗವಾಗಿಯೇ ನೋಡುವ ಒತ್ತಡಗಳೇನಿದ್ದವು ಎಂಬುದನ್ನು ಮತ್ತು ಕಾಲದಿಂದ ಕಾಲಕ್ಕೆ ಈ ಒತ್ತಡಗಳನ್ನು ಮೀರುವ ಸಾಧ್ಯತೆಗಳೇಕೆ ಚರಿತ್ರೆಯಲ್ಲಿ ಕಾಣದೆ ಹೋದವು ? ಎಂಬುದರ ಬಗ್ಗೆ ಸೂಕ್ಷ್ಮವಾಗಿ ಆಲೋಚಿಸಬೇಕಾಗಿದೆ.

ಅಹಿಂಸೆ, ತ್ಯಾಗ, ಬಲಿದಾನದ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ರಾಷ್ಟ್ರಪಿತ ಮಹಾತ್ಮಗಾಂಧಿ ೀಜಿಯವರಲ್ಲಿಯು ಸನಾತನ ಹಿಂದೂ ಮಹಿಳೆಯ ಚಿತ್ರವೇ ಉಳಿದುಕೊಂಡಿರುವುದಕ್ಕೆ ವಿಷಾದವೆನಿಸುತ್ತದೆ. ಹನ್ನೆರಡನೆಯ ಶತಮಾನದ ನಂತರ ಸಾಮೂಹಿಕವಾಗಿ ಮಹಿಳೆಯರು ಹೊರಬಂದು ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ದುಡಿದಂತೆ ಆಧುನಿಕ ಕಾಲದಲ್ಲಿ ಗಾಂಧೀಜಿಯ ಒತ್ತಾಸೆಯಿಂದಲೇ ಮಹಿಳೆಯರು ಮನೆಯ ಹೊಸಿಲು ದಾಟಿ ಹೊರಬಂದು ರಾಷ್ಟ್ರೀಯ ಚಳುವಳಿಯಲ್ಲಿ ತೊಡಗಿಕೊಳ್ಳುವಂತಾಯಿತೆಂಬುದು ಹೆಮ್ಮೆ ಸಂಗತಿ ನಿಜ. ಆದರೆ ಗಾಂಧೀಜಿಗೆ ಒಂದು ನಿಶ್ಚಿತವಾದ ಗುರಿಸಾಧನೆಯಲ್ಲಿ ಸ್ತ್ರೀಶಕ್ತಿಯ ಅವಶ್ಯಕತೆ ಕಾಣಿಸಿಕೊಂಡಿರುವುದರಿಂದ ಸ್ತ್ರೀಯರಿಗೆ ಸಾಮಾಜಿಕವಾಗಿ ಹೊರಬರುವಂತೆ ಒತ್ತಾಯಿಸಲಾಯಿತೇ ಹೊರತು ಹೆಣ್ಣಿನ ಉದ್ಧಾರಕ್ಕಾಗಿಯಲ್ಲ. ಆಂತರಿಕವಾಗಿ ಗಾಂಧೀಜಿಯಲ್ಲಿ ಸನಾತನ ಸಂಸ್ಕೃತಿಯ ಚೌಕಟ್ಟಿನೊಳಗಿರುವ ಹೆಣ್ಣಿನ ಬಗ್ಗೆ

ಗೌರವಾದರಗಳಿದ್ದವೆ ಹೊರತು ಚೌಕಟ್ಟಿನಾಚೆಗೆ ಬದುಕಲು ಇಚ್ಛಿಸುವ ಮಹಿಳೆಯರ ಕುರಿತ ಹಾಗೆ ಸದಭಿಪ್ರಾಯವಿರಲಿಲ್ಲ. ಗಾಂಧೀಜಿಯ ಸನಾತನ ಮನಸ್ಸು ಹೆಣ್ಣನ್ನು ಗೌರವಿಸುತ್ತದೆ. ಪೂಜಿಸುತ್ತದೆ. ಆದರೆ ಸಮಾನ ನೆಲೆಯಲ್ಲಿ ಬರುವುದನ್ನು ಇರುವುದನ್ನು ಸಹಿಸಿಕೊಳ್ಳಲಿಲ್ಲ. ವರ್ಣಾಶ್ರಮ ಪದ್ಧತಿಯನ್ನು ಒಪ್ಪಿದ ಗಾಂಧೀಜಿ ನಗೃಹಿಣಿಗೆ ಗೃಹದಾಚೆಗೆ ಬದುಕಿಲ್ಲವೆಂದೆ ಭಾವಿಸಿರುವರು. ಹೆಣ್ಣು ಗಂಡಿನ ಸಮಾನತೆಯ ಬಗ್ಗೆ ಗಾಂಧೀಜಿಯಲ್ಲಿ ಗೊಂದಲಗಳಿದ್ದವು. ಸ್ತ್ರೀ ಬದುಕಿಗೆ ಒಳಪಟ್ಟು ಮಾತನಾಡುವಾಗಲೆಲ್ಲ ಗಾಂಧೀಜಿಯ ಗಂಟಲಲ್ಲಿ ಮನು ಕಾಣಿಸಿಕೊಳ್ಳುತ್ತಾನೆ. "ಸ್ತ್ರೀ ಪುರುಷರ ಸಮಾನತೆಯೆಂದರೆ ಉದ್ಯೋಗಗಳ ಸಮಾನತೆಯೆಂದು ಅರ್ಥವಲ್ಲ. ಒಬ್ಬ ಸ್ತ್ರೀ ಬೇಟೆಯಾಡುವುದಕ್ಕೆ ಭರ್ಚಿಯನ್ನು ಉಪಯೋಗಿಸುವುದಕ್ಕೂ ನ್ಯಾಯಬದ್ಧ ಪ್ರತಿಬಂಧಕವಿರಲಾರದು. ಆದರೆ ಪುರುಷನೇ ಮಾಡಬೇಕಾದ ಕಾರ್ಯದಿಂದ ಅವಳು ಸ್ವಾಭಾವಿಕವಾಗಿಯೇ ಹಿಂಜರಿಯುತ್ತಾಳೆ. ಸ್ತ್ರೀ ಪುರುಷರಿಗೆ ಅವರವರ ದೇಹರಚನೆಗೆ ತಕ್ಕಂತೆ ಅವರವರ ಕಾರ್ಯ ನಿರ್ಧರಿತವಾಗಿದೆ. ಪ್ರಕೃತಿ ಪರಸ್ಪರ ಪೂರಕ ದೃಷ್ಟಿಯಿಂದ ಲಿಂಗಭೇದವನ್ನು ಸೃಷ್ಟಿಸಿದೆ". ಇನ್ನು ಮುಂದುವರಿದು ಹೇಳುವ ಮಾತುಗಳು "ವಿವಾಹಿತ ದಂಪತಿಗಳಲ್ಲಿ ಬಾಹ್ಯ ಕರ್ಮಗಳಿಗೆ ಸಂಬಂಧಿಸಿದಂತೆ ಪುರುಷನೇ ಶ್ರೇಷ್ಠ ಆದುದರಿಂದ ಅದರ ಬಗೆಗೆ ಅವನು ವಿಶೇಷ ಜ್ಞಾನವನ್ನು ಸಂಪಾದಿಸಿಕೊಳ್ಳುವುದು ಯುಕ್ತವಾದುದು. ಇದಕ್ಕೆ ಪ್ರತಿಯಾಗಿ ಗೃಹಜೀವನ ಪೂರ್ಣವಾಗಿ ಮಹಿಳೆಯ ಕ್ಷೇತ್ರ. ಆದುದರಿಂದ ಗೃಹಕೃತ್ಯದಲ್ಲಿಯೂ ಮಕ್ಕಳ ಪಾಲನೆ ಮತ್ತು ಶಿಕ್ಷಣಗಳಲ್ಲಿಯೂ ಆಕೆ ವಿಶೇಷ ಜ್ಞಾನವನ್ನು ಸಂಪಾದಿಸಬೇಕು. ಸ್ತ್ರೀಯರು ಜೀವನೋಪಾಯಕ್ಕಾಗಿ ದುಡಿಯಬೇಕೆಂಬುದರಲ್ಲಾಗಲಿ, ವಾಣಿಜ್ಯೋದ್ಯಮಗಳಲ್ಲಿ ಭಾಗವಹಿಸಬೇಕೆಂಬುದರಲ್ಲಾಗಲೀ ನನಗೆ ನಂಬಿಕೆಯಿಲ್ಲ". (ಗಾಂಧೀ ಗ್ರಂಥಮಾಲೆ ಮಹಿಳೆಯರು ಪುಟ 14, 16, 17 ವಿವರಗಳಿಗೆ ನೋಡಬಹುದು) ಎನ್ನುವುದಕ್ಕೆ ನಿಲ್ಲದೆ ಮುಂದುವರಿದು "ಸಾಮಾನ್ಯವಾಗಿ ತನ್ನ ಗಂಡನ ನೆರವಿಲ್ಲದೆ ಸ್ವತಂತ್ರವಾದ ಉದ್ಯಮದಲ್ಲಿ ತೊಡಗಿರುವ ಪತ್ನಿಯನ್ನು ನಾನು ಭಾವಿಸಲಾರೆ. ಮಕ್ಕಳ ಪೋಷಣೆ, ಗೃಹಕೃತ್ಯ ನಿರ್ವಹಣೆ ಇವೇ ಆಕೆಯ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಒಳಗೊಳ್ಳಲು ಸಾಕೆನಿಸುತ್ತದೆ". ಆಧುನಿಕ ಕಾಲದ, ಸಮುದ್ರ ಪರ್ಯಟಣೆ ಮಾಡಿ ಬಂದ ಗಾಂಧೀಜಿಯು ಕೂಡ ಹೆಣ್ಣಿನ ಕುರಿತ ಹಾಗೇ ವೈಜ್ಞಾನಿಕವಾಗಿ ಆಲೋಚಿಸಲು ಸಾಧ್ಯವಾಗಿಲ್ಲ. ಸನಾತನ ಧರ್ಮಸಂಸ್ಕೃತಿಯ ಬಗ್ಗೆ ಕುರುಡು ವ್ಯಾಮೋಹಿ ಗಾಂಧೀಜಿಯಿಂದ ಇಂತಹ ಮಾತುಗಳು ಬಂದಿವೆ. ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುವ ಉದಾರತೆಯು ಗಾಂಧೀಜಿಯಲ್ಲಿ ಇರದೆ ಹೋಗಿರುವುದಕ್ಕೆ ಅಸಹ್ಯಪಡುವಂತಾಗಿದೆ. ಹೀಗೆ ಹುರಿಗೊಂಡ ಜೀವವಿರೋಧಿ ಸರಪಳಿಯನ್ನು ತುಂಡರಿಸುವುದಕ್ಕೆ ಶಕ್ತಿಯಾಗಿ ಮಹಾಚೇತನವಾಗಿದ್ದವರು ಮಹಾತ್ಮ ಜ್ಯೋತಿಭಾ ಫುಲೆ, ಪೆರಿಯಾರ ರಾಮಸ್ವಾಮಿಯವರೆನ್ನಬಹುದು. ಅವರ ದಿಟ್ಟ ನಿಲುವು ಮತ್ತು ಸ್ಪಷ್ಟವಾದ ವಿಚಾರಗಳು ಮಹಿಳೆಯ ಬದುಕಿನ ಬದಲಾವಣೆಯ ದಿಕ್ಕು ದೆಸೆಗಳನ್ನು ವೈಚಾರಿಕವಾಗಿಯೇ ಗುರುತಿಸಿರುವರು. ಮಹಾತ್ಮ ಜ್ಯೋತಿಭಾ ಫುಲೆ, ಪೆರಿಯಾರ ರಾಮಸ್ವಾಮಿಯವರೆನ್ನಬಹುದು. ಅವರ ದಿಟ್ಟ ನಿಲುವು ಮತ್ತು ಸ್ಪಷ್ಟವಾದ ವಿಚಾರಗಳು ಮಹಿಳೆಯ ಬದುಕಿನ ಬದಲಾವಣೆಯ ದಿಕ್ಕು ದೆಸೆಗಳನ್ನು ವೈಚಾರಿಕವಾಗಿಯೇ ಗುರುತಿಸಿರುವರು. ಮಹಾತ್ಮ ಜ್ಯೋತಿಭಾ ಫುಲೆಯವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಡಾ॥ ಅಂಬೇಡ್ಕರ್‌ರವರು ಗುರುವಿನ ವಿಚಾರಗಳಿಗೆ ಕಾನೂನಿನ ಚೌಕಟ್ಟು ತೊಡಿಸಿ ಅನುಷ್ಠಾನಕ್ಕೆ ತರಬಯಸಿದರು. ಮಹಿಳಾ ಶಿಕ್ಷಣದ ಬಗ್ಗೆ ಮೊಟ್ಟಮೊದಲಿಗೆ ರೂಢಿಗತ, ಸಾಂಪ್ರದಾಯಿಕ ಸಕ್ತಿಗಟಳನ್ನು ಎದುರು ಹಾಕಿಕೊಂಡು ಸ್ತ್ರೀಯರಿಗೆ ಶಾಲೆ ತೆರೆದು ಶಿಕ್ಷಣ ನೀಡದ್ದಷ್ಟೇ ಅಲ್ಲ ವಿಧವಾ ವಿವಾಹವನ್ನು ಎತ್ತಿ ಹಿಡಿಯುತ್ತ ಬಹುಪತ್ನಿತ್ವದ ಬಗ್ಗೆ ಖಂಡಿಸುತ್ತ ಸಾಮಾಜಿಕ ಅನಿಷ್ಟಗಳಿಗೆ ವೈಚಾರಿಕ ಪರ್ಯಾಯಗಳನ್ನು ವಾಸ್ತವದಲ್ಲಿ ತಂದ ಧೀಮಂತ ವ್ಯಕ್ತಿತ್ವ ಜ್ಯೋತಿಬಾರವರದೆನ್ನಬಹುದು. "ಚರಿತ್ರೆ ಮೂಗು ಮಾಡಿರುವವರನ್ನು ಒಳಗೊಳ್ಳಲಿಲ್ಲ ನೆನೆಯಲಿಲ್ಲ ಮೂಗು ಚುಚ್ಚಿ ಗಾಯ ಮಾಡಿದ ವರ್ಗ ಜಾತಿ ಹಿತಾಸಕ್ತರನ್ನು ಹೆಗಲ ಮೇಲಿಟ್ಟುಕೊಂಡು ಜಗತ್ತಿಗೆಲ್ಲ ಪರಿಚಯಿಸುತ್ತ ಬಂದಿತು". ಗುರುವಿನ ಮಹತ್ವಾಕಾಂಕ್ಷೆಯನ್ನು ಬದಲಾವಣೆಯ ಹಾದಿಯನ್ನು ಕಂಡು ಮುನ್ನಡೆದಿದ್ದ ಬಾಬಾ ಸಾಹೇಬರಿಗೆ ಹಿಂದೂಧರ್ಮದ ಒಳಹೊಕ್ಕು ಜಾಲಾಡಲು ಸಾಧ್ಯವಾಯಿತು. ಮಹಾತ್ಮ ಫುಲೆಯವರು ಮಹಿಳೆಯರ ಬಗ್ಗೆ ಸಾಮಾಜಿಕವಾಗಿ ಹೇಳಿದ ವಿಷಯಗಳನ್ನು ಕಾನೂನು ಸಮ್ಮತಗೊಳಿಸುವಲ್ಲಿ ಅಂಬೇಡ್ಕರ್‌ರವರು ತಳೆದ ದಿಟ್ಟ ನಿಲುವಿಗೆ ಅನುಗುಣವಾದ ಫಲ ಸಾಮಾಜಿಕವಾಗಿ ನ್ಯಾಯಸಮ್ಮತವಾಗಿ ಸಿಗುತ್ತಿಲ್ಲ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ಮನುಮೂಲವೇ ಕೈಗೆ ಸಿಗುವುದು. ▢▢

(ಡಾ॥ ಭಾಬುರಾವ್ ಮುಡಬಿಯವರ 'ಮಹಿಳಾ ಸಬಲೀಕರಣ -ಅಂಬೇಡ್ಕರ್ ದೃಷ್ಟಿಕೋನ' ಪುಸ್ತಕದ ಮುನ್ನುಡಿಯಿಂದ)

"ಹೊನ್ನಿನ ಕಳಸದಲ್ಲಿ, ಚಿನ್ನದ ಕಲಶದಲ್ಲಿ
ಮಾಹಿತಿಯ ಕುಶಲತೆಯಲ್ಲಿ, ಜೈವಿಕದ ಮಮತೆಯಲ್ಲಿ,
ಭಾರತದ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ
ಕೊಂಡೊಯ್ದಿಹ ಚೆಲುವ ನಾಡಿದು
ಕರ್ನಾಟಕ"

ಕರುನಾಡ ಸಿರಿನುಡಿ - ಕನ್ನಡ
ಕಸ್ತೂರಿ ಪರಿಮಳದ ಕುಡಿ - ಕನ್ನಡ ನುಡಿ
ಹಾಲ್ಜೇನಿನ ಮಧುರ ಝರಿ - ಕನ್ನಡ ನಾಣ್ನುಡಿ

ಸುಮಾರು 2000 ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಇಂದು ಕೂಡ ಕರ್ನಾಟಕ ಸಮಗ್ರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಉದ್ಯಮ, ಸಿದ್ಧ ಉಡುಪು, ಆಭರಣಗಳು, ಕ್ರೀಡೆ, ಪುಷ್ಪೋದ್ಯಮದಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯೂ ಶ್ಲಾಘನೀಯ, ಕರ್ನಾಟಕ ಭಾರತಕ್ಕಷ್ಟೇ ಮಾತ್ರವಲ್ಲ ಇಡೀ ವಿಶ್ವಕ್ಕೆ ಮಾದರಿ.

ನಾಡಿನ ಸಮಸ್ತ ಜನತೆಗೆ
ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿಗೆ... ಇಂದು ಸುವರ್ಣ ಸಂಭ್ರಮ.

ಸುವರ್ಣ ಕರ್ನಾಟಕದ ವರ್ಷ : 2006

ಕರ್ನಾಟಕ ವಾರ್ತೆ.
Karnataka Information

ದೆಹಲಿ ವಿಶ್ವವಿದ್ಯಾಲಯದಲ್ಲಿ ಲೈಂಗಿಕ ಕಿರುಕುಳದ ರುದ್ರ ನರ್ತನ

ದೆಹಲಿ ವಿಶ್ವವಿದ್ಯಾನಿಲಯವು ಹಗರಣಗಳ ವಿಷಯದಲ್ಲಿ ತನ್ನದೇ ಆದ ದೊಡ್ಡ ಚರಿತ್ರೆಯನ್ನು ಹೊಂದಿದೆ. ಲೈಂಗಿಕ ಕಿರುಕುಳದ ವಿಷಯದಲ್ಲಂತೂ ಅದನ್ನು ಮೀರಿಸುವ ಇನ್ನೊಂದು ವಿ. ವಿ. ಇರಲಿಕ್ಕಿಲ್ಲ ಎಂದರೂ ತಪ್ಪಾಗದು. ಕಿರುಕುಳ ತಡೆಯಲಾಗದೆ ವಿಜ್ಞಾನ ಸಂಶೋಧಕಿಯರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೂ ಅಲ್ಲಿ ನಡೆದಿದೆ.

1992ರಲ್ಲಿ ಆ ವಿ.ವಿ.ಯಲ್ಲಿ ಇದ್ದಕ್ಕಿದ್ದಂತೆ ಭಾರೀ ಪ್ರಮಾಣದ ಪ್ರತಿಭಟನೆ, ಧರಣಿ, ವಾದವಿವಾದ, ಪತ್ರಿಕೆಗಳಲ್ಲಿ ಸುದ್ದಿ ಇತ್ಯಾದಿ ನಡೆದವು. ಈ ಎಲ್ಲ ಕೋಲಾಹಲಗಳಿಗೆ ಕಾರಣವಾದ ಕೇಂದ್ರ ವ್ಯಕ್ತಿಯೆಂದರೆ ಅಲ್ಲಿನ 'ವಯಸ್ಕರ ನಿರಂತರ ಶಿಕ್ಷಣ ಹಾಗೂ ವಿಸ್ತರಣೆ ವಿಭಾಗದ (ಡಿ.ಎ.ಸಿ.ಇ.ಇ.)' ನಿರ್ದೇಶಕನಾದ ಡಾ. ಎಸ್.ಸಿ. ಭಾಟಿಯಾ. ಸದರಿ ವಿಭಾಗದ 14 ಮಂದಿ ಸಹೋದ್ಯೋಗಿಗಳೇ ಖುದ್ದು ಸಹಿ ಮಾಡಿ ಆತನ ವಿರುದ್ಧ 'ಮಾನುಷಿ' ಪತ್ರಿಕೆಗೆ ಸಲ್ಲಿಸಿದ ದೂರಿನ ಪ್ರಕಾರ ಭಾಟಿಯಾನ ಚಾರಿತ್ರ್ಯ-ಸಾಸಹ ಹೀಗಿದೆ.

ಸದರಿ ವಿಭಾಗವು ಆರಂಭಗೊಂಡ ಬ್ಬಳಿಕ ಸುಮಾರು 22 ಮಂದಿ ಮಹಿಳೆಯರು ಅಲ್ಲಿ ನೇಮಕಗೊಂಡರೂ ಅವರ ಪೈಕಿ ಬಹುತೇಕ ಎಲ್ಲರೂ ಕೆಲಸ ತೊರೆದಿದ್ದರು. ಹೀಗೆ ಕೆಲಸ ತೊರೆದವರ ಪೈಕಿ 80 ಪ್ರತಿಶತ ಮಂದಿ ಭಾಟಿಯಾರಿಂದ ಒಂದಲ್ಲ ಒಂದು ರೀತಿಯ ಲೈಂಗಿಕ ಕಿರುಕುಳ ಅನುಭವಿಸಿದ್ದರು.

ವಿಭಾಗದಲ್ಲಿ ಭಾಟಿಯಾ ಓರ್ವನೇ ಖಾಯಂ ನೆಲೆಯ ಉದ್ಯೋಗಿಯಾಗಿದ್ದು ಉಳಿದವರೆಲ್ಲರೂ ಹಂಗಾಮಿ ನೆಲೆಯವರು. ಈ ಅಭದ್ರತೆಯನ್ನು ಆತ ಎಗ್ಗಿಲ್ಲದೆ ದುರುಪಯೋಗಿಸುತ್ತಿದ್ದ. ನೇಮಕ ಮಾಡಿಕೊಳ್ಳುವಾಗಲೂ ಆಕರ್ಷಕ, ಅವಿವಾಹಿತ, ಯುವತಿಯರನ್ನೇ ಆಯ್ದುಕೊಳ್ಳುತ್ತಿದ್ದ. ಅವರು ಮದುವೆ ಆಗದಂತೆ ನೋಡಿಕೊಳ್ಳುತ್ತಿದ್ದ. ಬಗೆ ಬಗೆಯ ಕಾಮ ಚೇಷ್ಟೆಗಳನ್ನು ಮಾಡುತ್ತಾ ಅವರನ್ನು ಲೈಂಗಿಕವಾಗಿ ಬಳಸಿಕೊಳ್ಳಲು ನಿರಂತರ ಯತ್ನಿಸುತ್ತಿದ್ದ. ಸಹಕರಿಸಿದವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಸಹಕರಿಸದವರನ್ನು ಸುಳ್ಳು ಆರೋಪ ಹೊರಿಸಿ ವಜಾ ಮಾಡುತ್ತಿದ್ದ.

ಆತನ ರೋಗ ನಿಜಕ್ಕೂ ಉಲ್ಬಣಾವಸ್ಥೆಯಲ್ಲಿತ್ತು. ಸಹೋದ್ಯೋಗಿ ಮಹಿಳೆಯರೊಂದಿಗೆ ಮೊಲೆ, ಸೊಂಟ, ರವಿಕೆ ಇತ್ಯಾದಿಗಳ ಬಗ್ಗೆ ಆತ ಚರ್ಚಿಸುತ್ತಿದ್ದ. ಮೊಲೆಗಳನ್ನು ಹಿಚುಕಲು ಯತ್ನಿಸುತ್ತಿದ್ದ. ಚಡ್ಡಿ, ಬ್ರಾ, ಇತ್ಯಾದಿಗಳ ಬಣ್ಣ ತೋರಿಸಲು ಒತ್ತಾಯಿಸುತ್ತಿದ್ದ. ಅವರ ಮುಂದೆಯೇ ಪ್ಯಾಂಟು ಜಾರಿಸಿ ಮುಜುಗರ ಉಂಟು ಮಾಡುತ್ತಿದ್ದ. ಅವರ ತೊಡೆಗಳ ಮೇಲೆ ತಲೆ ಇರಿಸಿ ತಲೆ ನೇವರಿಸಲು ಹೇಳುತ್ತಿದ್ದ.

ಆತನ ವಿರುದ್ಧ ದೂರು ನೀಡಲು ಯಾರೂ ಧೈರ್ಯ ತೋರುತ್ತಿರಲಿಲ್ಲ. ಯಾಕೆಂದರೆ ಹಾಗೆ ದೂರು ನೀಡಿದಾಗಲೆಲ್ಲ ವಿ. ವಿ.ಯ ಮುಖ್ಯಸ್ಥರು ಭಾಟಿಯಾ ಪರ ನಿಲ್ಲುತ್ತಿದ್ದರು. ಮಾತ್ರವಲ್ಲ ಇನ್ನಷ್ಟು ಹೆಚ್ಚಿನ ಕಿರುಕುಳ ಅನುಭವಿಸಬೇಕಾಗುತ್ತಿತ್ತು. ಹಾಗಾಗಿ ಕಿರುಕುಳ ಸಹಿಸಲಾಗದವರು ಹೆಚ್ಚಾಗಿ ರಾಜಿನಾಮೆ ನೀಡಿ ನಡೆದುಬಿಡುತ್ತಿದ್ದರು.

ಈ ವಿಭಾಗದ ಸಹ ನಿರ್ದೇಶಕರಾಗಿರುವ ಡಾ. ಸುಷ್ಮಾ ಮೆಹರ್ ಮಾತ್ರ ಕೈ ಕಟ್ಟಿ ಕೂರಲಿಲ್ಲ. 1987ರಲ್ಲಿ ಕುಲಪತಿಗಳಿಗೆ ಭಾಟಿಯಾ ವಿಲಾಸಗಳ ಸಾಕ್ಷ್ಯಾಧಾರ ಸಹಿತ ದೂರು ಸಲ್ಲಿಸಿದರು. ವಿ.ವಿ.ಯು ಪ್ರೊ. ಭವಿಸ್ಕರ್‌ರವರನ್ನು ವಿಚಾರಣಾ ಸಮಿತಿಯ ಮುಖ್ಯಸ್ಥರನ್ನಾಗಿಸಿತು. ಆದರೆ ಫಲಿತಾಂಶ ಊಹಿಸಿದಂತೆಯೇ ಆಯಿತು; ವಿಚಾರಣೆಯು ಕಣ್ಣೊರೆಸುವ ತಂತ್ರವಷ್ಟೇ ಆಯಿತು.

ಭಾಟಿಯಾರಿಂದ ಕಿರುಕುಳಕ್ಕೆ ಈಡಾದವರು 'ಮಾನುಷಿ'ಗೆ ಲಿಖಿತ ದೂರು ನೀಡಿದರು. 'ಮಾನುಷಿ' ಇದನ್ನು ಗಂಭೀರವಾಗಿ ಕೈಗೆತ್ತಿಕೊಂಡಿತು. ಆರೋಪಿಗಳ ವಿರುದ್ಧ ದೊಡ್ಡ ಸಮರವನ್ನೇ ಸಾರಿತು. ಸರಣಿ ಸರಣಿಯಾಗಿ ಲೇಖನಗಳು ಪ್ರಕಟಗೊಂಡವು. ಸಮಗ್ರ ತನಿಖೆಯನ್ನು ನಡೆಸಬೇಕೆಂದು ಪತ್ರಿಕೆ ಬಲವಾಗಿ ಆಗ್ರಹಿಸಿತು. ಡಿ.ಎ.ಸಿ.ಇ.ಇ. ನೌಕರರು ಸರಣಿ ಉಪವಾಸ ಸತ್ಯಾಗ್ರಹ ನಡೆಸಿದರು.

'ಭಾಟಿಯಾರನ್ನು ರಜೆಯ ಮೇಲೆ ತೆರಳಲು ಹೇಳಲಾಗುವುದು, ಡಿ.ಎ.ಸಿ.ಇ.ಇ. ಮುಖ್ಯಸ್ಥ ಹುದ್ದೆಯಿಂದ ಕೆಳಗಿಳಿಸಲಾಗುವುದು' ಎಂದು ಮಾರ್ಚ್ 26, 1992ರಂದು ಕುಲಪತಿ ಉಪೇಂದ್ರ ಭಕ್ಷಿ ಘೋಷಿಸಿದರು. ಆದರೆ ಇದು ಸುಳ್ಳು ಘೋಷಣೆಯೆಂದು ಶೀಘ್ರ ಬಹಿರಂಗವಾಯಿತು. ಪತ್ರಿಕೆಯು ಮತ್ತೆ ಬೆನ್ನಟ್ಟಿತು. ನಿಷ್ಪಕ್ಷಪಾತ ತನಿಖೆ ಆಗಲೇಬೇಕೆಂಬ ಒತ್ತಾಯಿಸಿತು.

''ತಾನು ಮುಗ್ಧ ತನಗೇನೂ ಗೊತ್ತಿಲ್ಲ. ಆರೋಪ ದುರುದ್ದೇಶದಿಂದ ಕೂಡಿದೆ, ಉದ್ಯೋಗ ಭದ್ರತೆ ದಕ್ಕದ

CPMG/KA/BGS-8/2003-05 RNI No. 45577/88

Posted at Basavanagudi P.O. On the 25th of every Month December - 2005

ಕಾರಣಕ್ಕೆ ಹೀಗೆಲ್ಲ ಇಲ್ಲ ಸಲ್ಲದ ಆರೋಪ ಹೊರಿಸಿದ್ದಾರೆ'' ಎಂದೆಲ್ಲ ಪತ್ರಿಕೆಗೆ ಬರೆದು ಭಾಟಿಯಾ ಆಕರ್ಷಕವಾಗಿ ನಾಟಕ ಆಡಿದ. ವಿ.ವಿ.ಯೂ ವಿಚಾರಣೆಯ ನಾಟಕ ಆಡಿತು. ಆದರೆ ಚಳುವಳಿಗಾರರು ಪಟ್ಟು ಬಿಡಲಿಲ್ಲ, ಒತ್ತಡ ತಾಳಲಾರದೆ ಕುಲಪತಿ ಭಕ್ಷಿಯವರು (ಒಂದು ವರ್ಷದ ಬಳಿ) ದೆಹಲಿಯ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಜಸ್ಟಿಸ್ ವಾಡ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದರು. ಇವರು ಮಾರ್ಚ್ 23, 1994ರಂದು ಸಲ್ಲಿಸಿದ ವರದಿಯಲ್ಲಿ ಭಾಟಿಯಾರ ಮೇಲೆ ಆರು ಆರೋಪಗಳನ್ನು ಹೊರಿಸಿದರು. ಆದರೂ ಉಪಕುಲಪತಿಗಳು ಕ್ರಮ ಕೈಗೊಳ್ಳಲಿಲ್ಲ.

ಉಪಕುಲಪತಿಗಳ ಈ ವರ್ತನೆಯನ್ನು ಮನಗಂಡು 'ಸ್ವಾಭಿಮಾನ್' ಎಂಬ ಸಮಿತಿಯನ್ನು ಸದರಿ ಹೋರಾಟಕ್ಕಾಗಿ ಸ್ಥಾಪಿಸಲಾಯಿತು. ಅನೇಕ ಶಿಕ್ಷಕಿಯರು, ವಿದ್ಯಾರ್ಥಿಗಳು ಇದನ್ನು ಸೇರಿದರು. ಅನೇಕ ಧರಣ ಕಾರ್ಯಕ್ರಮಗಳನ್ನು ನಡೆಸಲಾಯಿತು. ಆದರೆ 2/3 ಬಹುಮತವಿಲ್ಲದೆ ಭಾಟಿಯಾರನ್ನು ವಜಾಗೊಳಿಸಲು ಸಾಧ್ಯವಿಲ್ಲವೆಂದು ಹೇಳಿದರು. ಈ ಕುರಿತ ನಿಲುವಳಿ ಮಂಡನೆಯಾದಾಗ ಉದ್ದೇಶಪೂರ್ವಕವಾಗಿ ಬಿ.ಜೆ.ಪಿ. ಹಾಗೂ ಸಿ.ಪಿ.ಎಂ. ಒಲವುಳ್ಳ ಈರ್ವರು ಶಿಕ್ಷಕ ಪ್ರತಿನಿಧಿಗಳು ಗೈರುಹಾಜರಾದರೂ ಭಾಟಿಯಾ ಮತ್ತೆ ಮುಂದುವರಿಯುವಂತಾಯಿತು. ತೋರಿಕೆಗೆ ಅವರನ್ನು ಹಿಂಬಡ್ತಿಗೊಳಿಸಲಾಗಿದೆ ಎಂದು ಹೇಳಲಾಯಿತು.

'ಸ್ವಾಭಿಮಾನ್' ಹಾಗೂ 'ಮಾನುಷಿ' ವಿಚಾರಣಾ ಸಮಿತಿಯ ತೀರ್ಮಾನದ ವಿರುದ್ಧ ಹೈಕೋರ್ಟಿನಲ್ಲಿ ದಾವೆ ಹೂಡಿದರು. ಮಧ್ಯ ಪ್ರವೇಶಿಸುವಂತೆ ರಾಷ್ಟ್ರಪತಿಗಳನ್ನು ಕೋರಿದರು. ಸಂದರ್ಭದ ತೀವ್ರತೆಯನ್ನು ಗಮನಕ್ಕೆ ತೆಗೆದುಕೊಂಡು ತನ್ನ ತೀರ್ಮಾನವನ್ನು ಸಮಿತಿಯು ಮರುಪರಿಶೀಲಿಸಬೇಕೆಂದು ರಾಷ್ಟ್ರಪತಿಗಳು ಆದೇಶಿಸಿದರು.

ಈ ನಡುವೆ ದೆಹಲಿ ವಿ.ವಿ.ಗೆ ಹೊಸ ಉಪಕುಲಪತಿಗಳಾಗಿ ಡಾ|| ವಿ.ಆರ್. ಮೆಹತಾ ಅವರ ನೇಮಕವಾಯಿತು. ಹೊಸ ಉಪಕುಲಪತಿಗಳು, ನಾನಾ ಆರೋಪಗಳನ್ನು ಎದುರಿಸುತ್ತಿದ್ದ ಇತರ ಮೂವರು ಪ್ರೊಫೆಸರುಗಳ ಸಹಿತ ಭಾಟಿಯಾನನ್ನು 17, ಏಪ್ರಿಲ್, 1996ರಂದು ಸೇವೆಯಿಂದ ವಜಾ ಮಾಡಿದರು.

ಲೈಂಗಿಕ ಕಿರುಕುಳ ಹಗರಣದಲ್ಲಿ ಅಪರಾಧಿಗೆ ಶಿಕ್ಷೆಯಾದ ವಿರಳ ಉದಾಹರಣೆ ಇದು. ಹೀಗೆ ಗುರಿಮುಟ್ಟುವ ಹಾದಿಯಲ್ಲಿ ಅಪಾರ ಹಿಂಸೆ, ಅವಮಾನ, ಕಷ್ಟನಷ್ಟ ಅನುಭವಿಸಿಯೂ ಹೋರಾಟ ಕೈಬಿಡದೆ ದಿಟ್ಟತನ ಮೆರೆದವರು - ಡಾ|| ಸುಷ್ಮಾ ಮೆಹರ್. □□

ಕೃಪೆ : ಡೀಡ್ಸ್

To :

Smt/Sri

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085